ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ




SHRIDEVI EDUCATION

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 4, ಫೆಬ್ರವರಿ 2025
SHRIDEVI ANTARANGA
Monthly Magazine

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಆರೋಗ್ಯ ಮತ್ತು ಅಭಿವೃದ್ಧಿ ವಲಯಕ್ಕೊಂದು ಬೂಸ್ಟ್



ಕೇಂದ್ರ ಹಣಕಾಸು ಸಚಿವರೊಡನೆ ಶ್ರೀಮತಿ ಅಂಬಿಕಾ ಹುಲಿನಾಯ್ಕರ್.

ಫೆಬ್ರವರಿ 1ರಂದು ಕೇಂದ್ರ ಹಣಕಾಸು ಸಚಿವೆ ಶ್ರೀಮತಿನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಡಿಸಿದ 2025–26ರ ಸಾಲಿನ ಆಯವ್ಯಯವು ಬಹುತೇಕ ಎಲ್ಲಾ ದೃಷ್ಟಿಯಿಂದಲೂ ಯುಗಪರಿವರ್ತನೆಗಾಗಿ ದೇಶವು ಇರಿಸಿದ ಒಂದು ದೊಡ್ಡಹೆಜ್ಜೆ ಎಂದೇ ಹೇಳಬೇಕು. ಈ ಆಯವ್ಯಯವು ಇತರ ವಲಯಗಳಂತೆಯೇ ಆರೋಗ್ಯವಲಯಕ್ಕೂ ಕಸುವನ್ನು ತುಂಬುವ ಪ್ರಯತ್ನ ಮಾಡಿದೆ. ದೂರದೃಷ್ಟಿಯನ್ನು ಹೊಂದಿರುವ ಮತ್ತು ಎಲ್ಲಾ ವರ್ಗದ ಜನರಿಗೂ ಗುಣಮಟ್ಟದ ಆರೋಗ್ಯಸೇವೆಯನ್ನು ಒದಗಿಸುವ, ಆರೋಗ್ಯಕ್ಷೇತ್ರದಲ್ಲಿ ಎದುರಾಗಬಹುದಾದ ಹೊಸಹೊಸ ಸಮಸ್ಯೆ ಸವಾಲುಗಳನ್ನು ಎದುರಿಸಲು ಅಗತ್ಯವಾದ ಮತ್ತು ಮೂಲಸೌಕರ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿಯೂ ಈ ಆಯವ್ಯಯ ಯಶಸ್ವಿ ಪಾತ್ರವನ್ನು ವಹಿಸಿದೆ.

### ಆರೋಗ್ಯವಲಯಕ್ಕೆ ತೋರಿದ ಬದ್ಧತೆ

ಜನತೆಯ ಕಲ್ಯಾಣವನ್ನು ಸಾಧಿಸುವಲ್ಲಿ ಆರೋಗ್ಯಸೇವೆಗೆ ಮಹತ್ತ್ವವನ್ನು ನೀಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೆ ಇರಬೇಕಾದ ಬದ್ಧತೆಯನ್ನು 2025ರ ಬಜೆಟ್ ಹೊಂದಿದೆ. ಈ ಸಾಲಿನ ಆಯವ್ಯಯದಲ್ಲಿ ಆರೋಗ್ಯವಲಯಕ್ಕೆ 96ಸಾವಿರ ಕೋಟಿಗಳನ್ನು ಒದಗಿಸಲಾಗಿದೆ. ಇದು ಕಳೆದ ವರ್ಷಕ್ಕಿಂತ ಶೇಕಡ 12ರಷ್ಟು ಎಂಬುದು ಗಮನಾರ್ಹ ಅಂಶ. ಆಯವ್ಯಯದಲ್ಲಿ ಶೇಕಡ 2ರಷ್ಟು ಮೊಬಲಗನ್ನು ಆರೋಗ್ಯವಲಯಕ್ಕೆ ಹಂಚಿಕೆ ಮಾಡಿದೆ.

ಆರೋಗ್ಯವಲಯದಲ್ಲಿನ ಬದ್ಧತೆಯು ಕೇವಲ ದೊಡ್ಡ ನಗರಗಳಿಗೆ ಸೀಮಿತವಾಗದೆ, ವ್ಯಾಪಕವಾಗಿ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳನ್ನು ತನ್ನ ಪರಿಧಿಯೊಳಕ್ಕೆ ಸೇರಿಸಿಕೊಂಡಿದೆ. ಈ ಮಹತ್ಕಾರ್ಯವನ್ನು ಯಶಸ್ವಿಗೊಳಿಸುವ ಪ್ರಯತ್ನದಲ್ಲಿ ಇಂದಿನ ಕಾಲದ ಅಗತ್ಯಕ್ಕೆ ತಕ್ಕಂತೆ ಇರುವ ಕೃತಕ ಬುದ್ಧಿಮತ್ತೆಯನ್ನು (ಎ.ಐ) ಹಾಗೂ ಟೆಲಿಮೆಡಿಸಿನ್ನನ್ನು ಒಳಗೊಂಡ ಡಿಜಿಟಲ್ ಆರೋಗ್ಯ ವ್ಯವಸ್ಥೆಯನ್ನು ಬಳಸಿಕೊಳ್ಳಲು ಯೋಚಿಸಿರುವುದು ಅತ್ಯಂತ ಸ್ವಾಗತಾರ್ಹ ವಿಚಾರವಾಗಿದೆ. ಇದರ ಅಂಗವಾಗಿ, ಪ್ರಪಂಚದಲ್ಲಿಯೇ ಅತಿದೊಡ್ಡ ಆರೋಗ್ಯ ಯೋಜನೆಯಾದ 'ಆಯುಷ್ಮಾನ್ ಭಾರತ' (AB-PMJAY) ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲು ಕೂಡ ಸರ್ಕಾರವು ಯೋಚಿಸುತ್ತಿರುವುದು ಈ ಕ್ಷೇತ್ರದಲ್ಲಿನ ಒಂದು ಅತ್ಯುತ್ತಮ ಬೆಳವಣಿಗೆಯಾಗಿದೆ.

▶▶ 2ನೇ ಪುಟಕ್ಕೆ...

# ತುಮಕೂರಿನ ಶ್ರೀದೇವಿ ಆಸ್ಪತ್ರೆ ನಾಡಿನ ಅಮೂಲ್ಯ ಆಸ್ತಿ



ಆಚಾರ್ಯ ಎಂ. ನಾಗರಾಜ್ ಅವರ ಜೀವನ ಚರಿತ್ರೆ 'A Beacon of Light Dedicated to Srevice - Acharya Dr. M. Nagaraju`s Life Mission" ಕೃತಿಯನ್ನು ಅಸಗೋಡು ಜಯಸಿಂಹ ಅವರು ಬಿಡುಗಡೆ ಮಾಡಿದರು.

ಮಧ್ಯ ಕರ್ನಾಟಕ ಜಿಲ್ಲೆಗಳ ವಿಶೇಷವಾಗಿ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುತ್ತಿರುವ ತುಮಕೂರಿನ ಶ್ರೀದೇವಿ ಆಸ್ಪತ್ರೆ ನಾಡಿನ ಅಮೂಲ್ಯ ಆಸ್ತಿ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಹೃದ್ರೋಗ ವಿಭಾಗದಲ್ಲಿ ಆರಂಭಿಸಲಾದ ಎರಡನೇ ಕ್ಯಾಥ್ ಲ್ಯಾಬ್‌ನ್ನು ಫೆ.19ರಂದು ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಮತ್ತು ಆಸ್ಪತ್ರೆ ಈ ಭಾಗದಲ್ಲಿ ಮಹತ್ತರ ಸಾಧನೆ ಮಾಡಿ, ಒಳ್ಳೆಯ ಹೆಸರು ಗಳಿಸಿದೆ. ಇದು ಭವಿಷ್ಯದಲ್ಲಿ ಉಜ್ವಲ ಸಂಸ್ಥೆಯಾಗಿ ಬೆಳೆಯಲಿದ್ದು ಇದಕ್ಕೆ ಎಲ್ಲ ರೀತಿಯ ಸಹಕಾರ ನೀಡುವ ಭರವಸೆಯನ್ನು ನೀಡಿದರು.

ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಡೇ–ಕೇರ್ ಮತ್ತು ಕಿಮೋಥೊರಫಿ ಸೌಲಭ್ಯ ಆರಂಭಿಸಲು ರಾಜ್ಯ ಸರ್ಕಾರ ನಿರ್ಧಾರ ಮಾಡಿದ್ದು, ಸದ್ಯದಲ್ಲಿಯೇ ಈ ಯೋಜನೆಗೆ ಚಾಲನೆ ನೀಡಲಾಗುವುದು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಜೊತೆಗೂಡಿ ಜನರಿಗೆ ಗುಣಮಟ್ಟದ ವೈದ್ಯಕೀಯ ಸೌಲಭ್ಯ ಒದಗಿಸಬೇಕಾಗಿದೆ. ಈ ನಿಟ್ಟಿನಲ್ಲಿ ತುಮಕೂರಿನ ಶ್ರೀದೇವಿ ಆಸ್ಪತ್ರೆ ಮತ್ತು ಸಿದ್ದಾರ್ಥ ವೈದ್ಯಕೀಯ ಸಂಸ್ಥೆಗಳಿಗೆ ಡೇ–ಕೇರ್ ಮತ್ತು ಕಿಮೋಥೆರಫಿ ಚಿಕಿತ್ಸಾ ನಿರ್ವಹಣಾ ಜವಾಬ್ದಾರಿ ವಹಿಸಿಕೊಂಡುವುದಾಗಿ ಸಚಿವರು ಪ್ರಕಟಿಸಿದರು.

ರಾಜ್ಯದ ಎಂಬತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಆರಂಭಿಸಿರುವ ಪುನೀತ್ ರಾಜ್‌ಕುಮಾರ್ ಹೆಸರಿನ ಹೃದಯಜ್ಯೋತಿ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದು. ಸರ್ಕಾರದ ಈ ಸೌಲಭ್ಯದಿಂದ ಈವರೆಗೆ 250ಕ್ಕೂ ಹೆಚ್ಚು ಜನರ ಜೀವವನ್ನು ಕಾಪಾಡಲಾಗಿದೆ. ವೈದ್ಯಕೀಯ ಲೋಕದಲ್ಲಿ ಪ್ರತಿನಿತ್ಯ ಹೊಸ–ಹೊಸ ಬದಲಾವಣೆಗಳನ್ನು ಕಾಣುತ್ತೇವೆ. ಹೀಗಾಗಿ ಮುಂದಿನ ದಿನಗಳಲ್ಲಿ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಿಗೂ ಮದ್ದು, ಪರಿಹಾರ ದೊರಕಲಿದೆ. ಭವಿಷ್ಯದಲ್ಲಿ ಮನುಷ್ಯನ ಅಯಸ್ಸು 120 ವರ್ಷದವರೆಗೂ ಹೋಗುವ ಸಾಧ್ಯತೆಯಿದೆ.

ಕೆಲವು ಆನುವಂಶೀಯ ಕಾಯಿಲೆಗಳಿಗೂ ಪರಿಹಾರ ದೊರಕಲಿದೆ. ಅದೇ ರೀತಿ ಹೊಸ ಹೊಸ ಕಾಯಿಲೆಗಳು ಕಾಡುವ ಅಪಾಯಗಳಿವೆ. ಮುಖ್ಯವಾಗಿ ವೈದ್ಯರಿಗೆ ಮತ್ತು ದಾದಿಯರಿಗೆ ಜೀವ ಉಳಿಸುವಂತಹ ಶಕ್ತಿಯಿದೆ. ದೇವರನ್ನು ಬಿಟ್ಟರೇ ಇಂತಹ ಅದ್ಭುತ ಶಕ್ತಿಯಿರುವುದು ವೈದ್ಯಕೀಯ ಸಮುದಾಯಕ್ಕೆ ಮಾತ್ರ. ಆದ್ದರಿಂದ ವೈದ್ಯರು ವೃತ್ತಿಧರ್ಮ ಕಾಪಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್ ಮಾತನಾಡಿ, "ದಿನೇಶ್ ಗುಂಡೂರಾವ್ ಆರೋಗ್ಯ ಇಲಾಖೆಗೆ ಹೊಸ ಕಾಯಕಲ್ಪ



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಹೃದ್ರೋಗ ವಿಭಾಗದಿಂದ ಆರಂಭಿಸಲಾದ ಎರಡನೇ ಕ್ಯಾಥ್ ಲ್ಯಾಬ್ ಉದ್ಘಾಟಿಸಿದರು. ಚಿತ್ರದಲ್ಲಿ ಚಿಕ್ಕನಾಯಕನಹಳ್ಳಿ ಶಾಸಕರಾದ ಸುರೇಶ್ ಬಾಬು, ಪತ್ರಕರ್ತರಾದ ನಾಗಣ್ಣ ಮತ್ತು ಡಾ.ಹುಲಿನಾಯ್ಕರ್.

ನೀಡಿದ್ದಾರೆ. ಸರ್ಕಾರಿ ಆಸ್ಪತ್ರೆಗಳ ಸೇವೆಯ ಬಗ್ಗೆ ಜನರಲ್ಲಿ ನಂಬಿಕೆ, ವಿಶ್ವಾಸ ಹೆಚ್ಚಾಗುವಂತೆ ಮಾಡಿದ್ದಾರೆ ಅನ್ನಭಾಗ್ಯ ಮತ್ತು ಯಶಸ್ವಿನಿ ಯೋಜನೆ ಜಾರಿಗೊಳಿಸುವಲ್ಲಿ ಸಚಿವರ ಪಾತ್ರ ಬಹಳ ಮುಖ್ಯವಾಗಿತ್ತು. ಈಗಿನ ಕಾಲಘಟ್ಟ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯಲ್ಲಿ ಕೆಲವು ಮಾರ್ಪಾಡು ಮಾಡಬೇಕು" ಎಂದು ಸಚಿವರಿಗೆ ಮನವಿ ಮಾಡಿದರು. ಎರಡನೇ ಕ್ಯಾಥ್ ಲ್ಯಾಬ್ ಆರಂಭದಿಂದ ಈ ಭಾಗದ ಜನರಿಗೆ ಇನ್ನೂ ಹೆಚ್ಚಿನ ಆರೋಗ್ಯ ಸೇವೆ ಒದಗಿಸಲು ಸಹಕಾರಿಯಾಗಲಿದೆ. ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾವ್ ನೀಡಿದ ಸಹಾಯ– ಸಹಕಾರವನ್ನು ಡಾ.ಹುಲಿನಾಯ್ಕರ್ ಅವರು ಮೆಲುಕು ಹಾಕಿದರು.

ಬರಹಗಾರರು ಮತ್ತು ಸಂಪಾದಕರಾಗಿರುವ ಡಾ.ಕೆ.ಆರ್. ಕಮಲೇಶ್ ಮಾತನಾಡಿ, "ದಿವಂಗತ ಮಾಜಿ ಮುಖ್ಯಮುಂತ್ರಿ ಆರ್.ಗುಂಡೂರಾವ್ ಮರೆಯಲಾಗದ ಸಮಾಜಮುಖಿ– ಜನಹಿತ ಕೆಲಸ ಮಾಡಿದ್ದು, ಮುಂದಿನ ಪೀಳಿಗೆಗೆ ಇದನ್ನು ಮನವರಿಕೆ ಮಾಡುವ ಮತ್ತು ದಾಖಲೀಕರಣ ಮಾಡುವ ಕೆಲಸ ಮುಖ್ಯವಾಗಿ ಆಗಬೇಕಿದೆ" ಎಂದು ಒತ್ತಿ ಹೇಳಿದರು.

▶▶ 3ನೇ ಪುಟಕ್ಕೆ...

# ಆರೋಗ್ಯ ಮತ್ತು ಅಭಿವೃದ್ಧಿ ವಲಯಕ್ಕೊಂದು ಬೂಸ್ಟ್

▶▶ ಮೊದಲನೇ ಪುಟದಿಂದ

ಈ ಯೋಜನೆಯ ಒಂದು ಅಂಗವಾಗಿ, ನಮ್ಮ ಆರ್ಥಿಕತೆಯ ಅವಿಭಾಜ್ಯವಾಗಿರುವ (ಅಲ್ಪ ಕಾಲಕ್ಕೆ ನೇಮಿಸಿಕೊಂಡಿರುವ) ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರಿಗೆ ಕೂಡ ಆರೋಗ್ಯಸೇವೆಯನ್ನು ಮತ್ತು ತನ್ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸಲಾಗುವುದು. ಇದಕ್ಕಾಗಿ ಸುಮಾರು ಹತ್ತು ದಶಲಕ್ಷ ಸಂಖ್ಯೆಯಷ್ಟು ಇರುವ ಈ ಕಾರ್ಮಿಕರು 'ಈ-ಶ್ರಮ್' ಪೋರ್ಟಲ್ಲಿನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ. ಇದೊಂದು ಅದ್ಭುತವಾದ ಬೆಳವಣಿಗೆಯಾಗಿದೆ. ಸರ್ಕಾರದ ಈ ನಿಲವು ಭಾರತದ ಮಾನವೀಯ ದೃಷ್ಟಿಯನ್ನು ಜಗತ್ತಿಗೇ ತೋರಿಸಲಿದೆ.



### ಖಾಸಗಿ ಕ್ಷೇತ್ರದ ಜೊತೆಗೂಡಿ ಕೆಲಸ

ಈ ಮಹಾನ್ ಯಜ್ಞದಲ್ಲಿ ಖಾಸಗಿಕ್ಷೇತ್ರವೂ ಕೈಜೋಡಿಸುವಂತೆ ಪ್ರಯತ್ನ ಮಾಡುವ ಉದ್ದೇಶವನ್ನು ಕೇಂದ್ರ ಸರ್ಕಾರವು ಹೊಂದಿದೆ. ಇದು ಫಲಕಾರಿಯಾಗುತ್ತದೆ ಮತ್ತು ಆರೋಗ್ಯ ಸೇವೆಯು ದೇಶದ ಮೂಲೆಮೂಲೆಯನ್ನೂ ತಲುಪುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದಕ್ಕೆ ಅವಶ್ಯಕವಾದ ಮೂಲಭೂತಸೌಕರ್ಯಗಳನ್ನು ಒದಗಿಸುವುದಕ್ಕೆ ಸರ್ಕಾರವು ಕಟಿಬದ್ಧವಾಗಿರುವುದು ಈ ಆಯವ್ಯಯದಲ್ಲಿ ಕಂಡುಬರುತ್ತಿದೆ. ಈ ಕಾರಣಗಳಿಂದಾಗಿ, 2025ರ ಬಜೆಟ್ಟಿಗೆ, ವೈದ್ಯಕೀಯಕ್ಷೇತ್ರದ ಗಣ್ಯರಿಂದ ಸಕಾರಾತ್ಮಕವಾದ ಪ್ರತಿಕ್ರಿಯೆಯು ವ್ಯಕ್ತವಾಗುತ್ತಿದೆ.

ದೇಶದ ಬೌದ್ಧಿಕ ಬೆಳವಣಿಗೆಯಲ್ಲಿ ಸಂಶೋಧನೆಗೆ ಹೆಚ್ಚಿನ ಆದ್ಯತೆಯಿರ ಬೇಕಾಗಿರುವುದು ಅತ್ಯಂತ ಮುಖ್ಯವಾದ ಸಂಗತಿ. ಈ ಸಾಲಿನ ಆಯವ್ಯಯದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸಂಶೋಧನೆ ಕೈಗೊಳ್ಳಲು ಇಪ್ಪತ್ತುಸಾವಿರ ಕೋಟಿರೂ.ಗಳನ್ನು ಮೀಸಲಾಗಿಡಲಾಗಿದೆ. ಇದರಿಂದ ಆರೋಗ್ಯಕ್ಷೇತ್ರದ ಸಂಶೋಧನೆಗಳಿಗೆ ಧನಸಹಾಯ ದೊರೆಯುವ ಸಾಧ್ಯತೆಯಿದೆ.

### ವೈದ್ಯಕೀಯ ಶಿಕ್ಷಣಕ್ಕೆ ಉತ್ತೇಜನ

ಇದಲ್ಲದೆ, ವೈದ್ಯರು ಮತ್ತು ಜನತೆಯ ನಡುವೆ ಪ್ರಕೃತ ಇರುವ 1:1263 ಅನುಪಾತವನ್ನು 2030ರ ವೇಳೆಗೆ ವಿಶ್ವಆರೋಗ್ಯ ಸಂಸ್ಥೆಯು ನಿಗದಿಪಡಿಸಿರುವ 1:1000ರ ಮಟ್ಟಕ್ಕೆ ಹೆಚ್ಚಿಸುವ ಕಾರ್ಯಕ್ರಮದ ಅಂಗವಾಗಿ, ಈ ಆಯವ್ಯಯದಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳಲ್ಲಿ ಸದ್ಯದಲ್ಲಿ ಇರುವ ಪ್ರವೇಶಾವಕಾಶದ ಜೊತೆಗೆ ಇನ್ನೂ 10,000 ಸೀಟುಗಳನ್ನು ಈ ವರ್ಷ ಹಾಗೂ ಒಟ್ಟಾರೆಯಾಗಿ ಮುಂದಿನ ಐದು ವರ್ಷಗಳಲ್ಲಿ 75,000 ಸೀಟುಗಳಿಗೆ ಹೆಚ್ಚಿಸುವ ಉದ್ದೇಶವು ಸರ್ಕಾರಕ್ಕಿದೆ. ಆರೋಗ್ಯಾಭಿವೃದ್ಧಿಯ ದಿಕ್ಕಿನಲ್ಲಿ ಮತ್ತು ವೈದ್ಯಕೀಯಕ್ಷೇತ್ರದ ಮೂಲಸೌಕರ್ಯಗಳನ್ನು ಬಲಪಡಿಸುವಲ್ಲಿರಿಸಿರುವ ಉತ್ತಮವಾದ ಮತ್ತು ನಿರ್ಣಾಯಕವಾದ ಹೆಜ್ಜೆ ಇದಾಗಿವೆ. ಇವು ಆರೋಗ್ಯ ಕ್ಷೇತ್ರದ ವೃತ್ತಿಪರರಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಹಾಗೂ ಜನತೆಯ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸುತ್ತವೆ ಎಂದು ಆರೋಗ್ಯಕ್ಷೇತ್ರದ ಗಣ್ಯರು ಅಭಿಪ್ರಾಯಪಟ್ಟಿದ್ದಾರೆ. ಈ ದಿಟ್ಟಹೆಜ್ಜೆಗಳು, ವೈದ್ಯಕೀಯಶಿಕ್ಷಣ ಹಾಗೂ ವೈದ್ಯಕೀಯ ಸೇವಾಕ್ಷೇತ್ರದಲ್ಲಿ ಇರುವವರಿಗೆ ಸ್ಫೂರ್ತಿದಾಯಕವಾಗಿದ್ದು, ಜನರಿಗೆ ಉತ್ತಮ ಸೇವೆಯನ್ನು ಒದಗಿಸಲು ತಮ್ಮನ್ನು ತಾವು ಸಮರ್ಪಿಸಿಕೊಳ್ಳುವಂತೆ ಮಾಡುತ್ತದೆ. ಅಲ್ಲದೆ ಇಂತಹ ಕ್ರಮಗಳಿಗಾಗಿ ಕೆಲವು ವರ್ಷಗಳಿಂದ ನಿರೀಕ್ಷೆ ಕ್ಷೇತ್ರಕ್ಕೆ ಇತ್ತು ಎಂದು ಹಲವು ಗಣ್ಯರು ಹೇಳಿದ್ದಾರೆ.

### ಕ್ಯಾನ್ಸರ್ ವಿರುದ್ಧದ ಹೋರಾಟಕ್ಕೆ ಸಾಥ್

ಇನ್ನೊಂದು ಮುಖ್ಯ ಅಂಶವೆಂದರೆ, ವೈದ್ಯಕೀಯ ಶಿಕ್ಷಣವನ್ನು ವಿಸ್ತರಿಸಲು ಮತ್ತು 2025–26ನೆಯ ಸಾಲಿನಲ್ಲಿಯೇ ದೇಶದ ಜಿಲ್ಲಾ ಆಸ್ಪತ್ರೆಗಳಲ್ಲಿ 200 'ಡೇ–ಕೇರ್' ಕ್ಯಾನ್ಸರ್ ಸೇವಾಕೇಂದ್ರಗಳನ್ನು ಸ್ಥಾಪಿಸಲು ಈ ಆಯವ್ಯಯದಲ್ಲಿ ಗಮನಹರಿಸಿರುವುದು ಒಂದು ಉತ್ತಮ ಅಂಶವಾಗಿದೆ. ಇದರಿಂದ ಆರೋಗ್ಯ ಕ್ಷೇತ್ರದಿಂದ ದೊರಕುವ ಅನುಕೂಲಗಳನ್ನು ಜನತೆಯು, ಅದರಲ್ಲಿಯೂ ಗ್ರಾಮೀಣ ಪ್ರದೇಶದ ಜನರು, ಸುಲಭವಾಗಿ ಹಾಗೂ ತಮಗೆ ಹತ್ತಿರವಿರುವ ಆಸ್ಪತ್ರೆಗಳಿಂದ ಪಡೆದುಕೊಳ್ಳಬಹುದು. ಭಾರತದಲ್ಲಿ ಕ್ಯಾನ್ಸರ್‌ನ ಪ್ರಮಾಣವು ಹೆಚ್ಚುತ್ತಿದೆ. ರಾಷ್ಟ್ರೀಯ ಕ್ಯಾನ್ಸರ್ ನೋಂದಣಿ ಕಾರ್ಯಕ್ರಮ 2020ರ ವರದಿಯ ಪ್ರಕಾರ ಕ್ಯಾನ್ಸರ್ ಪೀಡಿತರ ಸಂಖ್ಯೆ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ 11ರಷ್ಟು ಇರಲಿದೆ. ಈ ದೃಷ್ಟಿಯಿಂದ ಸರ್ಕಾರದ ಉದ್ದೇಶವು ಸಕಾಲಿಕವಾಗಿದೆ ಮತ್ತು ಮುಂದಿನ ದಿನಗಳಲ್ಲಿ ಇದು ಅತಿ ಮಹತ್ತ್ವವನ್ನು ಪಡೆದುಕೊಳ್ಳಲಿದೆ. ಅಲ್ಲದೆ, ಮೂವತ್ತಾರು ಜೀವರಕ್ಷಕ ಔಷಧಗಳನ್ನು ಆಮದು ಸುಂಕದಿಂದ ಸಂಪೂರ್ಣವಾಗಿ ವಿನಾಯತಿಯನ್ನು ಪಡೆಯುವ ವಸ್ತುಗಳ ಪಟ್ಟಿಗೆ ಹೊಸದಾಗಿ ಸೇರಿಸಿರುವುದನ್ನು ಹಾಗೂ ಇತರ ಆರು ಔಷಧಗಳನ್ನು ಶೇಕಡ 5ರ ಸುಂಕದ ಪಟ್ಟಿಗೆ ಸೇರಿಸಿರುವುದನ್ನು ಇಡೀ ದೇಶವು ತುಂಬು ಹೃದಯದಿಂದ ಸ್ವಾಗತಿಸುತ್ತದೆ. ಲಕ್ಷಾಂತರ ರೋಗಿಗಳ ಚಿಕಿತ್ಸಾ ವೆಚ್ಚವು ಸಾಕಷ್ಟು ಕಡಮೆ ಮಾಡಲು ಈ ಕ್ರಮವು ಸಹಾಯ ಮಾಡುತ್ತದೆ.

### ವೈದ್ಯಕೀಯ ಪ್ರವಾಸೋದ್ಯಮಕ್ಕೆ ಬೆಂಬಲ

ಈ ಸಾಲಿನ ಆಯವ್ಯಯದಲ್ಲಿ ಕೈಗೊಂಡಿರುವ ಕ್ರಮಗಳು ಆರೋಗ್ಯಸೇವೆಯ ಕ್ಷೇತ್ರದಲ್ಲಿ ವಿಶ್ವದಲ್ಲಿಯೇ ಒಂದು ಪ್ರಮುಖ ತಾಣವಾಗಲು ಸಿದ್ಧವಾಗಿರುವ ಭಾರತವು ಅತ್ಯಾಧುನಿಕ ಚಿಕಿತ್ಸೆಗಳಲ್ಲಿ ಜಾಗತಿಕ ನಾಯಕನಾಗಿ ಅತಿ ಶೀಘ್ರವಾಗಿ ಹೊರಹೊಮ್ಮುವುದಕ್ಕೆ ಅನುವು ಮಾಡಿಕೊಡುತ್ತವೆ. ಇದಕ್ಕೆ ಇಂಬು ಕೊಡುವಂತೆ, ಹೊರದೇಶದಿಂದ ಚಿಕಿತ್ಸೆಗಾಗಿ ನಮ್ಮ ದೇಶಕ್ಕೆ ಬರುವ ರೋಗಿಗಳಿಗೆ ಸುಲಭವಾಗಿ ವೀಸಾಗಳನ್ನು ನೀಡಲು ಹೊಸ ಮಾನದಂಡಗಳನ್ನು ರೂಪಿಸುವ ಹಾಗೂ ಹಾಗೆ ಬಂದವರಿಗೆ ಆರೋಗ್ಯಸೇವೆಯನ್ನು ನೀಡುವ ವಿಷಯದಲ್ಲಿ ಖಾಸಗೀ ಆಸ್ಪತ್ರೆಗಳನ್ನು ಪಾಲುದಾರರನ್ನಾಗಿಸುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದೆ. ಇದರಿಂದ ಭಾರತದ ವೈದ್ಯಕೀಯ ಪ್ರವಾಸೋದ್ಯಮ ಮಾರುಕಟ್ಟೆಯು 2026ರ ವೇಳೆಗೆ 13ಶತಕೋಟಿ ಡಾಲರ್ ತಲುಪುವ ನಿರೀಕ್ಷೆಯಿದೆ. ಈ ಉಪಕ್ರಮಗಳು ವೈದ್ಯಕೀಯ ಪ್ರವಾಸೋದ್ಯಮಕ್ಕೆ ಉತ್ತೇಜನವನ್ನು ನೀಡುವುದಕ್ಕೆ ಒಂದು ವರದಾನವೂ ಆಗಲಿವೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಇದರ ಜೊತೆಜೊತೆಗೇ, ದೇಶದಲ್ಲಿನ ಆರೋಗ್ಯವ್ಯವಸ್ಥೆಯನ್ನು ಆಧುನೀಕರಿಸಲು ಆಸ್ಪತ್ರೆಯ ನಿರ್ವಹಣೆ, ರೋಗನಿದಾನ ಹಾಗೂ ನಿಖರವಾದ ಔಷಧಗಳನ್ನು ಸೂಚಿಸುವುದರಲ್ಲಿ ಎ.ಐ.(AI) ಮತ್ತು ಡಿಜಿಟಲ್‌ಗಳ ಕ್ಷೇತ್ರದಲ್ಲಿ ಆಗಿರುವ ಮತ್ತು ಆಗುತ್ತಿರುವ ನವೀನ ಸಂಶೋಧನೆಗಳ ಲಾಭವನ್ನು ಅಳವಡಿಸಿಕೊಳ್ಳುವುದು ಮತ್ತು ಸಮರ್ಥ ವೈದ್ಯರನ್ನು ಹಾಗೂ ಇತರ ಸಿಬ್ಬಂದಿಗಳನ್ನು ಸರ್ಕಾರದ ಆಸ್ಪತ್ರೆಗಳಲ್ಲಿ ನೇಮಿಸಿಕೊಳ್ಳುವುದು, ಕೇಂದ್ರ ಹಾಗೂ ಎಲ್ಲಾ ರಾಜ್ಯಸರ್ಕಾರಗಳ ಹೊಣೆಯಾಗಬೇಕಾಗಿದೆ. ಈ ದಿಕ್ಕಿನಲ್ಲಿ ಉತ್ತಮ ಸೇವೆಯನ್ನು ಜನತೆಗೆ ಸಲ್ಲಿಸುವಂತೆ ಮತ್ತು ಇದಕ್ಕೆ ಆವಶ್ಯಕವಾಗಿರುವ ಕೊಡುಗೆಗಳನ್ನು ಸರ್ಕಾರಕ್ಕೆ ಅಥವಾ ಆಸ್ಪತ್ರೆಗಳಿಗೆ ನೀಡುವಂತೆ ಖಾಸಗಿ ಉದ್ಯಮಿಗಳಿಗೆ ಪ್ರೇರಣೆಯನ್ನು ಸರ್ಕಾರಗಳು ನೀಡಬೇಕು.

### ಮಕ್ಕಳು ಮತ್ತು ಮಹಿಳೆಯರಿಗೆ ಆದ್ಯತೆ

ಕೇಂದ್ರದ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಗಮನ ಹರಿಸಿರುವ ಮತ್ತೊಂದು ಮಹತ್ವಾಕಾಂಕ್ಷೆಯ ವಿಚಾರವೆಂದರೆ, ದೇಶದಲ್ಲಿರುವ ಕೋಟ್ಯಂತರ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು, ಈಶಾನ್ಯ ಪ್ರದೇಶದಲ್ಲಿನ ಹದಿಹರೆಯದ ಹೆಣ್ಣುಮಕ್ಕಳು – ಇವರಿಗೆ ಪೌಷ್ಟಿಕಾಂಶದ ಪೂರೈಕೆಯನ್ನು ಒದಗಿಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಧನಸಹಾಯವನ್ನು ನೀಡಲು ಉದ್ದೇಶಿಸಿರುವ ಮಾನದಂಡಗಳಲ್ಲಿ ಸುಧಾರಣೆಯನ್ನು ಜಾರಿಗೆ ತರುವುದು.

ದೇಶದಲ್ಲಿ ಆರೋಗ್ಯಕ್ಷೇತ್ರದ ಅಭಿವೃದ್ಧಿಗಾಗಿ ಕೈಗೊಳ್ಳಲು ಉದ್ದೇಶಿಸಿರುವ ಈ ಪರಿವರ್ತನಶೀಲ ಸುಧಾರಣೆಗಳೊಂದಿಗೆ ಈ ಆಯವ್ಯಯವು ಮಧ್ಯಮ ವರ್ಗದ ಜನತೆಗೆ ಅಭೂತಪೂರ್ವವೆನ್ನಬಹುದಾದ ರಿಯಾಯತಿಗಳನ್ನು ಆದಾಯ ತೆರಿಗೆಯ ವ್ಯವಸ್ಥೆಯಲ್ಲಿ ನೀಡಲಿದೆ. ಇದರ ಲಾಭವು ವಾರ್ಷಿಕವಾಗಿ 12 ಲಕ್ಷ ಆದಾಯವನ್ನು ಪಡೆಯುವ ಎಲ್ಲರಿಗೂ ದೊರಕಲಿದೆ. ಆದಾಯ ತೆರಿಗೆಯಲ್ಲಿ ದೊರೆಯುವ ಈ ಉಳಿತಾಯವು ಈ ವರ್ಗದ ಖರ್ಚು ಮಾಡುವ ಶಕ್ತಿಯು ವೃದ್ಧಿಯಾಗುವಂತೆ ಮಾಡಿ ದೇಶದ ಆರ್ಥಿಕತೆಯ ಮೇಲೆ ಉತ್ತಮ ಪರಿಣಾಮವನ್ನು ಬೀರುತ್ತದೆ. ಇದರಿಂದಾಗಿ ದೇಶದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗುತ್ತದೆ.

### ಕರ್ನಾಟಕದ ರೈಲ್ವೇ ಯೋಜನೆಗಳಿಗೆ ಅನುದಾನ

ಈ ಸಲದ ಕೇಂದ್ರ ಆಯವ್ಯಯದಲ್ಲಿ ಕರ್ನಾಟಕದ ಹಲವಾರು ರೈಲ್ವೆ ಯೋಜನೆಗಳಿಗೆ ಒಟ್ಟು 7564 ಕೋಟಿ. ರೂಗಳನ್ನು ಮೀಸಲಿಡಲಾಗಿದೆ. ಇವುಗಳಲ್ಲಿ ತುಮಕೂರು ವಿಭಾಗದ ತುಮಕೂರು–ದಾವಣಗೆರೆ ಮಾರ್ಗವೂ ಸೇರಿದ್ದು ಇದರ ಒಟ್ಟು ವೆಚ್ಚವು ಸುಮಾರು 2140 ಕೋಟಿ ರೂಗಳೆಂದು ಹಿಂದೆ ಅಂದಾಜಿಸಲಾಗಿತ್ತು. ಬಹಳ ಹಿಂದೆಯೇ ಅಂದರೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೇ ಈ ಯೋಜನೆಯ ಕಲ್ಪನೆಗೆ ಬೀಜಾವಾಪನೆಯಾಗಿತ್ತು. ಯುಪಿಎ–1ರಲ್ಲಿ ಕೇಂದ್ರ ರೈಲ್ವೆ ಸಚಿವರಾಗಿದ್ದ ಲಾಲ್ಲೂಪ್ರಸಾದ್ ಅವರು ಈ ಯೋಜನೆಯ ಅನುಷ್ಠಾನದಲ್ಲಿ ಆಸಕ್ತಿ ತೋರಿಸಿದ್ದರು. ಇದರಲ್ಲಿ ಆಗಿದ್ದ ಪ್ರಗತಿ ಮಾತ್ರ ಅತ್ಯಲ್ಪ.



ಈ ವರ್ಷದ ಆಯವ್ಯಯದಲ್ಲಿ ಇದಕ್ಕೆ ಪ್ರಾಮುಖ್ಯವನ್ನು ನೀಡಿ 2025–26ನೆಯ ಸಾಲಿನ ವೆಚ್ಚಕ್ಕಾಗಿ 549.45ಕೋಟಿ.ರೂಗಳನ್ನು ಮೀಸಲಿರಿಸಲಾಗಿದೆ. ಈ ಮಾರ್ಗವು ಸಿದ್ಧವಾದ ಮೇಲೆ ತುಮಕೂರಿನಿಂದ ದಾವಣಗೆರೆಯ ನಡುವಿನ ಪ್ರಯಾಣದ ಅಂತರವು 65ಕಿ.ಮೀ.ನಷ್ಟು ಕಡಮೆಯಾಗಲಿದೆ. ಇದರ ಅನುಷ್ಠಾನದಿಂದ ತುಮಕೂರು, ಸಿರಾ, ಹಿರಿಯೂರು, ಚಿತ್ರದುರ್ಗ ಮತ್ತು ದಾವಣಗೆರೆ ನಗರಗಳು ರೈಲ್ವೆ ಮೂಲಕ ಪರಸ್ಪರ ಸಂಪರ್ಕಕ್ಕೆ ಬರುತ್ತವೆ. ಈ ವಿಭಾಗದ ವಾಣಿಜ್ಯ ಮತ್ತು ಕೈಗಾರಿಕಾ ಬೆಳವಣಿಗೆಯಲ್ಲಿ ತುಮಕೂರು–ದಾವಣಗೆರೆ ರೈಲ್ವೆ ಮಾರ್ಗ ಪ್ರಮುಖ ಪಾತ್ರವನ್ನು ವಹಿಸಲಿದೆ.

▶▶ 3ನೇ ಪುಟಕ್ಕೆ...

## ಆಯವ್ಯಯದ ಸಾಧಕ-ಬಾಧಕ

**ಅನುಕೂಲಗಳು:**

- 2025–26ನೆಯ ಸಾಲಿನಲ್ಲಿ ದೇಶದಾದ್ಯಂತ 200ಜಿಲ್ಲಾ ಆಸ್ಪತ್ರೆಗಳಲ್ಲಿ 'ಡೇ–ಕೇರ್' ಕ್ಯಾನ್ಸರ್ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಈ ಆಯವ್ಯಯದಲ್ಲಿ ಉದ್ದೇಶಿಸಿರುವುದು.
- ಮೂವತ್ತಾರು ಜೀವರಕ್ಷಕ ಔಷಧಗಳಿಗೆ ಆಮದು ಸುಂಕದಿಂದ ವಿನಾಯತಿ.
- ಟೆಲಿಮೆಡಿಸಿನ್ನಿನ ಸೌಕರ್ಯವನ್ನು ವಿಸ್ತರಿಸಿರುವುದು ಎಐ ಡಿಜಿಟಲ್ ಆರೋಗ್ಯ ವ್ಯವಸ್ಥೆಯಲ್ಲಿ ರೋಗನಿದಾನ ರೇಡಿಯಾಲಜಿ ಸೇವೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಬಳಸಿಕೊಳ್ಳುವುದು.
- ವೈದ್ಯಕೀಯ ಕಾಲೇಜುಗಳಲ್ಲಿ ಈ ವರ್ಷ 10,000 ಸೀಟುಗಳನ್ನು ಹಾಗೂ ಐದು ವರ್ಷಗಳಲ್ಲಿ ಒಟ್ಟು 75,000 ಸೀಟುಗಳನ್ನು ಹೆಚ್ಚಾಗಿ ಸೇರಿಸುವ ಕ್ರಮ.ಇದರಿಂದ ವೈದ್ಯರು ಮತ್ತು ಜನತೆಯ ನಡುವೆ ಪ್ರಕೃತಇರುವ 1:1263 ಅನುಪಾತವನ್ನು 2030ರ ವೇಳೆಗೆ ವಿಶ್ವಆರೋಗ್ಯ ಸಂಸ್ಥೆಯು ನಿಗದಿಪಡಿಸಿರುವ 1:1000ರ ಮಟ್ಟಕ್ಕೆತರುವುದು.
- ವೈದ್ಯಕೀಯ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು 'ಭಾರತದಲ್ಲಿ ವೈದ್ಯಕೀಯ ಸೇವೆ' ಯೋಜನೆಯಡಿಯಲ್ಲಿ ಹೊರದೇಶದ ರೋಗಿಗಳಿಗೆ ಸುಲಭವಾಗಿ ವೀಸಾಗಳನ್ನು ನೀಡಲು ಹೊಸ ಮಾನದಂಡಗಳು.
- ಪ್ರಪಂಚದಲ್ಲಿಯೇ ಅತಿ ದೊಡ್ಡಆರೋಗ್ಯ ಯೋಜನೆಯಾದ 'ಆಯುಷ್ಮಾನ್ ಭಾರತ' (AB-PMJAY)ಯೋಜನೆಯ ಅಡಿಯಲ್ಲಿ ಅಲ್ಪಕಾಲಕ್ಕೆ ನೇಮಿಸಿಕೊಂಡಿರುವ ಕಾರ್ಮಿಕರಿಗೆ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರಿಗೆ ಆರೋಗ್ಯಸೇವೆಯ ಭದ್ರತೆ.
- ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು, ಈಶಾನ್ಯ ಪ್ರದೇಶದಲ್ಲಿನ ಹದಿಹರೆಯದ ಹೆಣ್ಣುಮಕ್ಕಳು – ಇವರಿಗೆ ಪೌಷ್ಟಿಕಾಂಶದ ಪೂರೈಕೆಯನ್ನು ಒದಗಿಸುವ ಕಾರ್ಯಕ್ರಮದ ಮುಂದುವರಿಕೆ
- ವಿಮಾಕ್ಷೇತ್ರದಲ್ಲಿ 100% ವಿದೇಶೀ ಬಂಡವಾಳ ಹೂಡಿಕೆಯಿಂದ ಕ್ಯಾನ್ಸರ್ ಸೇವೆಗೆ ಮತ್ತಷ್ಟು ಬಲ.

**ಕೊರತೆಗಳು:**

- ವೈದ್ಯಕೀಯ ಉಪಕರಣಗಳ ಮೇಲಿನ ಜಿಎಸ್‌ಟಿಯನ್ನು ಪರಿಷ್ಕರಿಸದಿರುವುದು.
- ಹೊರರೋಗಿಗಳನ್ನು ರೋಗನಿದಾನದ ಸೇವೆಗಳಿಗೆ ವಿಮಾಸೌಲಭ್ಯವನ್ನು ಕಲ್ಪಿಸದಿರುವುದು.
- ದೀರ್ಘಾವಧಿಯಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಅಗತ್ಯವಾದ ಮೂಲಸೌಕರ್ಯಗಳ ಬಗೆಗೆ ಯೋಜನೆಗಳಿಲ್ಲದಿರುವುದು.
- ವೈದ್ಯಕೀಯ ಕಾಲೇಜುಗಳ ಪ್ರವೇಶಾತಿಯಲ್ಲಿ ಹಾಗೂ ಡೇ–ಕೇರ್ ಕ್ಯಾನ್ಸರ್ ಸೇವಾಕೇಂದ್ರಗಳಲ್ಲಿ ಉದ್ದೇಶಿಸಿರುವ ಹೆಚ್ಚಳವು ಮುಂದಿನ ದಿನಗಳಲ್ಲಿ ಆಗಬಹುದಾದ ಬೇಡಿಕೆಯನ್ನು ಗಮನಿಸಿದಾಗ ಸಾಲದು ಎನಿಸುತ್ತದೆ.

▪ ಡಾ.ರಮಣ ಹುಲಿನಾಯ್ಕರ್
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್

ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್

ಸಲಹಾ ಸಂಪಾದಕರು
ಎಸ್.ಭಾರತಿ

ಸಂಪಾದಕ ಮಂಡಲಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋಜ್ಞಮಣಿ ಎಂ.ಎಚ್
ಡಾ. ಲಾವಣ್ಯ ರಮಣ

ಸಹಾಯಕ ಸಂಪಾದಕರು:
ಎಸ್. ಆನಂದ

ಪುಟ ವಿನ್ಯಾಸ:
ಸುಮಾ ಸಾಗರ್

## ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸುವರ್ಣ ಮಹೋತ್ಸವ

# ತಮಿಳುನಾಡಿನ ತಿರುಚ್ಚಿರಾಪಳ್ಳಿಯಲ್ಲಿ ಜರುಗಿದ ರಾಷ್ಟ್ರೀಯ ಜಾಂಬೂರಿ ಉತ್ಸವ

"ಆಧುನಿಕ ತಮಿಳುನಾಡಿನ ನಿರ್ಮಾಪಕರಲ್ಲಿ ಒಬ್ಬರಾಗಿರುವ ಡಾ.ಎಂ.ಕರುಣಾನಿಧಿ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ವತಿಯಿಂದ ತಿರುಚ್ಚಿರಾಪಳ್ಳಿಯಲ್ಲಿ ರಾಷ್ಟ್ರೀಯ ಜಾಂಬೂರಿ ಉತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಉದ್ಘಾಟಿಸಿದ ತಮಿಳುನಾಡಿನ ಉಪಮುಖ್ಯಮಂತ್ರಿಗಳಾದ ಉದಯನಿಧಿ ಸ್ಟಾಲಿನ್ ಅವರು "ಶ್ರೀಎಂ. ಕರುಣಾನಿಧಿ ಅವರ ಸಾಮಾಜಿಕ, ಆರ್ಥಿಕ ಮತ್ತು ಸಾಹಿತ್ಯಿಕ ಚಿಂತನೆಗಳ ಪ್ರಭಾವ ತಮಿಳುನಾಡಿನ ಮೇಲೆ ಮಾತ್ರವಲ್ಲ ಇಡೀ ಭಾರತದ ಮೇಲಾಗಿರುವುದನ್ನು ಗಮನಿಸಬಹುದು. ಅವರು ಆಧುನಿಕ ಭಾರತದ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. ಸಾಮಾಜಿಕ ನ್ಯಾಯ ಹಾಗೂ ರಾಜ್ಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯದ ಪ್ರತಿಪಾದಕರಲ್ಲಿ ಅವರು ಪ್ರಮುಖರಾಗಿದ್ದರು.

"ಸ್ಕೌಟ್ಸ್ ಮತ್ತು ಗೈಡ್ಸ್‌ನ ಜನಕರಾದ ರಾಬರ್ಟ್ ಬೇಡನ್ ಪೊವೆಲ್ ಅವರು ಜೀವನ ಮೌಲ್ಯಗಳ ಆರಾಧಕರಾಗಿದ್ದರು. ವಿಶ್ವಕ್ಕೆ ಮೌಲ್ಯಯುತ ಯುವಜನಾಂಗವನ್ನು ಕೊಡಬೇಕೆಂಬ ಕನಸನ್ನು ಹೊಂದಿದ್ದು ಅದಕ್ಕಾಗಿ ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಬದ್ಧತೆ, ರಾಷ್ಟ್ರಪ್ರೇಮ ಹಾಗೂ ಆತ್ಮವಿಶ್ವಾಸ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಶ್ಲಾಘನೀಯವಾದ ವಿಚಾರ. ದೇಶದಲ್ಲಿ ಉತ್ತಮ ಯುವಜನತೆಯನ್ನು ನಿರ್ಮಾಣ ಮಾಡುವಲ್ಲಿ ಈ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತಿದೆ.

"ಇಂದು ತಿರುಚ್ಚಿರಾಪಳ್ಳಿ ಮಿನಿ ಭಾರತವಾಗಿ ಪರಿವರ್ತನೆಯಾಗಿದೆ. ಇಂದಿನ ಜಾಂಬೂರಿಗೆ ಭಾರತದ ಎಲ್ಲಾ ರಾಜ್ಯದಿಂದ ಮಕ್ಕಳು ಆಗಮಿಸಿದ್ದಾರೆ. ಅದರ ಜೊತೆಗೆ



ನೇಪಾಳ, ಮಲೇಶಿಯಾ, ಬರ್ಮಾ ಸೌದಿ ಅರೇಬಿಯಾ, ಸಿಂಗಪೂರ್ ಕಡೆಗಳಿಂದಲೂ ಮಕ್ಕಳು ಆಗಮಿಸಿರುವುದು ನಮಗೆ ತುಂಬಾ ಸಂತೋಷವಾಗಿದೆ. ಇಲ್ಲಿ ಇಪ್ಪತ್ತುಸಾವಿರ ಮಕ್ಕಳು ಸೇರಿರುವುದು ನಮಗೆ ಹೆಮ್ಮೆ ಎನಿಸಿದೆ. ಶಿಬಿರದಲ್ಲಿ ಏಳುದಿನಗಳನ್ನು ಅವರುಗಳು ಅರ್ಥಪೂರ್ಣವಾಗಿ ಕಳೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿನ ಮಕ್ಕಳ, ಶಿಸ್ತು, ಬದ್ಧತೆ ಮತ್ತು ಉತ್ಸಾಹವನ್ನು ಗಮನಿಸಿದಾಗ ಭಾರತಕ್ಕೆ ಉನ್ನತ ಭವಿಷ್ಯವಿದೆ ಎನ್ನುವ ವಿಶ್ವಾಸ ಮೂಡುತ್ತದೆ.

"ತಮಿಳುನಾಡು ಸರ್ಕಾರ ಈ ಸಾಲಿನ ಜಾಂಬೂರಿಗೆ 39ಕೋಟಿ ರೂಗಳನ್ನು ಒದಗಿಸಿದೆ. ಇದರ ಜೊತೆಗೆ ನಮ್ಮ ಅನೇಕ ಸಚಿವರು ತಿರುಚ್ಚಿರಾಪಳ್ಳಿಯಲ್ಲಿ ಠಿಕಾಣಿ ಹೂಡಿ ಇದರ ಯಶಸ್ಸಿಗೆ ಶ್ರಮಿಸಿದ್ದಾರೆ. ಈ ಜಾಂಬೂರಿ ಚರಿತ್ರಾರ್ಹವಾದ ಘಟನೆಯಾಗಿದೆ. ಇದರ ಯಶಸ್ವಿಗೆ ಶ್ರಮಿಸಿದ ರಾಜ್ಯದ ಶಿಕ್ಷಣ ಸಚಿವರು ಮತ್ತು ತಮಿಳುನಾಡಿನ ಭಾರತ್ ಮತ್ತು ಸ್ಕೌಟ್ಸ್‌ನ ಅಧ್ಯಕ್ಷರಾದ ಅನ್‌ಬಿಲ್ (Anbil) ಮಹೇಶ್ ಅವರನ್ನು ಅಭಿನಂದಿಸುತ್ತೇನೆ. ಇದರ ಜೊತೆಗೆ ಕೆಲಸ ಮಾಡಿದ ಎಲ್ಲ ಸಚಿವರು ಮತ್ತು ಅಧಿಕಾರಿಗಳನ್ನು ಕೂಡ ಅಭಿನಂದಿಸುತ್ತೇನೆ" ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ತನ್ನ ಸುವರ್ಣ ಮಹೋತ್ಸವದ ಅಂಗವಾಗಿ ಜನವರಿ 28ರಂದು ತಿರುಚ್ಚಿರಾಪಳ್ಳಿಯಲ್ಲಿ ಜಾಂಬೂರಿ ಉತ್ಸವವನ್ನು ಹಮ್ಮಿಕೊಂಡಿತ್ತು.

ಈ ಜಾಂಬೂರಿಗೆ ವಿಶೇಷ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು "ನಾನು ಕರ್ನಾಟಕರಾಜ್ಯದ ಉಪ ಮುಖ್ಯಮಂತ್ರಿಯಾಗಿ ಇಲ್ಲಿಗೆ ಬಂದಿಲ್ಲ. ಸ್ಕೌಟ್ಸ್‌ನ ವಿದ್ಯಾರ್ಥಿಯಾಗಿ ಇಲ್ಲಿಗೆ ಬಂದಿದ್ದೇನೆ. ತಮಿಳುನಾಡು ಸರ್ಕಾರ ಈ ಸಾಲಿನ ಜಾಂಬೂರಿಯನ್ನು ಅತ್ಯಂತ ಯಶಸ್ವಿಯಾಗಿ ಸಂಘಟನೆ ಮಾಡಿದೆ. ಈ ಜಾಂಬೂರಿ ತಮಿಳುನಾಡಿನ ಸಾಂಸ್ಕೃತಿಕ ವೈಭವವನ್ನು ಸಮರ್ಥವಾಗಿ ಪ್ರತಿಬಿಂಬಿಸಿದೆ. ಜೊತೆಗೆ ಸಹಬಾಳ್ವೆ, ಭಾವೈಕ್ಯ, ರಾಷ್ಟ್ರೀಯತೆ ಹಾಗೂ ಜಾತ್ಯತೀತ ತತ್ವಗಳನ್ನು ಮತ್ತೊಮ್ಮೆ ಜನಮನದಲ್ಲಿ ಪ್ರತಿಷ್ಠಾಪಿಸಲು ಈ ಜಾಂಬೂರಿ ಯಶಸ್ವಿಯಾಗಿದೆ. ಇಲ್ಲಿ ಭಾಗವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತಮ ಸಂದೇಶವನ್ನು ತನ್ನ ಜೊತೆಗೆ ಕೊಂಡೊಯ್ಯುವುದರಲ್ಲಿ ಯಾವುದೇ ಅನುಮಾನವಿಲ್ಲ" ಎಂದರು. ಕರ್ನಾಟಕ ರಾಜ್ಯದ ವಿಧಾನಸಭೆಯ ಅಧ್ಯಕ್ಷರಾದ ಯು.ಟಿ.ಖಾದರ್ ಅವರು ಜಾಂಬೂರಿಯಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೂ ಶುಭಾಶಯಗಳನ್ನು ತಿಳಿಸಿದರು.

ಪ್ರಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ತಮಿಳುನಾಡಿನ ಶಿಕ್ಷಣ ಸಚಿವರು ಹಾಗೂ ಆ ರಾಜ್ಯದ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಧ್ಯಕ್ಷರಾದ ಎ ಮಹೇಶ್ ಅವರು "ಈ ಸಾಲಿನ ಜಾಂಬೂರಿ ಎಲೈಟ್ ವರ್ಲ್ಡ್ ರೆಕಾರ್ಡ್‌ನಲ್ಲಿ (Elite World Records) ದಾಖಲಾಗಿರುವುದು ಸಂತೋಷದ ವಿಚಾರ. ಇಲ್ಲಿಗೆ ಆಗಮಿಸಿರುವ ಎಲ್ಲ ವಿದ್ಯಾರ್ಥಿಗಳನ್ನು ನಾನು ಆತ್ಮೀಯವಾಗಿ ಸ್ವಾಗತಿಸುತ್ತೇನೆ" ಎಂದರು.

ರಾಷ್ಟ್ರೀಯ ಸ್ಕೌಟ್‌ನ ಆಯುಕ್ತರಾದ ಕೆ.ಕೆ. ಖಂಡೇವಾಲ ಅವರು "ಮುಂದಿನ ದಿನಗಳಲ್ಲಿ ಒಂದು ಕೋಟಿ ಮಕ್ಕಳನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ನ ವ್ಯಾಪ್ತಿಗೆ ತರುವುದಕ್ಕೆ ಕಾರ್ಯಕ್ರಮವನ್ನು ರೂಪಿಸಲಾಗಿದೆ" ಎಂದರು. ರಾಷ್ಟ್ರೀಯ ಕಾರ್ಯದರ್ಶಿ ಅನಿಲ್‌ಕುಮಾರ್ ಜೈನ್ ಅವರು ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಾರ್ಯಕ್ರಮಗಳನ್ನು ವಿವರಿಸಿದರು. ಈ ಜಾಂಬೂರಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಂಸ್ಥಾಪಕರಾದ ರಾಬರ್ಟ್ ಬೇಡನ್ ಪೊವೆಲ್‌ನ ಮೊಮ್ಮಗ ಡ್ರಾವಿಡ್ ಪೊವೆಲ್ ಭಾಗವಹಿಸಿ ತಮ್ಮ ಸಂತಸವನ್ನು ಹಂಚಿಕೊಂಡರು. ತಮಿಳುನಾಡಿನ ಸಚಿವರಾದ ಕೆ.ಎನ್.ನೆಹರು. ಸುಬ್ರಹ್ಮಣ್ಯಂ, ಎಸ್.ಎಸ್.ಶಿವಶಂಕರ್ ಹಾಗೂ ರಾಜ್ಯದ ಹಿರಿಯ ಅಧಿಕಾರಿಗಳು ಈ ಸಮಾವೇಶದಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿದ್ದರು.

### ಕರ್ನಾಟಕ ರಾಜ್ಯದಲ್ಲಿ ಸ್ಕೌಟ್ ಮತ್ತು ಗೈಡ್ಸ್‌ನ ಆಂದೋಲನ

"ಸ್ವಾತಂತ್ರ ಪೂರ್ವದಿಂದಲೂ ಕರ್ನಾಟಕ ರಾಜ್ಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಚಳವಳಿ ಉತ್ತಮವಾಗಿ ನಡೆಯುತ್ತಾ ಬಂದಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ತಮ್ಮನ ಮಗ ಮುಂದೆ ಮೈಸೂರು ಸಂಸ್ಥಾನವನ್ನು ಆಳಿದ ಜಯಚಾಮರಾಜೇಂದ್ರ ಒಡೆಯರ್ ಅವರನ್ನು ಸ್ಕೌಟ್‌ನ ವಿದ್ಯಾರ್ಥಿಯಾಗಿ ಮಾಡಿದ್ದರು. ನಮ್ಮ ಕಾಲದಲ್ಲಿ ರಾಜ್ಯದಲ್ಲಿ ಏಳು ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಮಾವೇಶಗಳನ್ನು ಯಶಸ್ವಿಯಾಗಿ ನಡೆಸಿದ್ದೇವೆ. ಮೈಸೂರಿನಲ್ಲಿ ಜರುಗಿದ ಅಂತಾರಾಷ್ಟ್ರೀಯ ಜಾಂಬೂರಿಯಲ್ಲಿ 35,000 ಮಕ್ಕಳು ಭಾಗವಹಿಸಿದ್ದು ಇಂದಿಗೂ ದಾಖಲೆಯ ವಿಚಾರವಾಗಿದೆ. ಇಂತಹ ಸಮಾವೇಶಗಳನ್ನು ನಡೆಸಲು ನಮಗೆ ಕರ್ನಾಟಕದ ಸರ್ಕಾರ ಎಲ್ಲ ರೀತಿಯ ಬೆಂಬಲವನ್ನು ನೀಡುತ್ತಾ ಬಂದಿದೆ.

"ಕರ್ನಾಟಕ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಕುರಿತು ಬಹುದೊಡ್ಡ ಕನಸನ್ನು ಹೊಂದಿದ್ದಾರೆ. ರಾಜ್ಯದ ಎಲ್ಲಾ ಶಾಲೆಗಳಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್‌ನ ಘಟಕವಿರಬೇಕೆಂದು ಅವರು ಯೋಚಿಸಿದ್ದಾರೆ. ಇದು ಅನುಷ್ಠಾನವಾದರೆ ಕರ್ನಾಟಕ ರಾಜ್ಯ ಭಾರತ್ ಮತ್ತು ಸ್ಕೌಟ್ಸ್‌ನ ಭೂಪಟದಲ್ಲಿ ಧ್ರುವತಾರೆಯಾಗಿ ಕಂಗೊಳಿಸುವುದರಲ್ಲಿ ಯಾವುದೇ ಸಂಶಯವಿಲ್ಲ" ಎಂದು ಕರ್ನಾಟಕದ ಮಾಜಿ ಸಚಿವರು, ಕರ್ನಾಟಕ ರಾಜ್ಯದ ಮುಖ್ಯ ಆಯುಕ್ತರು ಆದ ಪಿ.ಜಿ.ಆರ್.ಸಿಂಧ್ಯ ಅವರು ಈ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು. ಅದಕ್ಕೆ ಕರ್ನಾಟಕರಾಜ್ಯದ ವಿಧಾನಪರಿಷತ್ತಿನ ಮಾಜಿ ಸದಸ್ಯರಾದ ಮೋಹನ ಕೊಂಡಜ್ಜಿ ಧ್ವನಿ ಕೂಡಿಸಿದರು.




▪ ನಿರೂಪಣೆ: ಶ್ರೀವತ್ಸ

---

# ಆರೋಗ್ಯ ಮತ್ತು ಅಭಿವೃದ್ಧಿ ವಲಯಕ್ಕೊಂದು ಬೂಸ್ಟ್

▸▸ 2ನೇ ಪುಟದಿಂದ

ಈ ಮಾರ್ಗದ ಯೋಜನೆಗೆ ಮರುಜೀವವನ್ನು ತುಂಬಿದ ತುಮಕೂರು ಲೋಕಸಭಾಕ್ಷೇತ್ರದ ಸದಸ್ಯರೂ ಹಾಗೂ ಕೇಂದ್ರದ ಸಂಪುಟದಲ್ಲಿ ರೈಲ್ವೆ ಮತ್ತು ಜಲಶಕ್ತಿಖಾತೆಯ ರಾಜ್ಯಸಚಿವರಾಗಿರುವ ವಿ. ಸೋಮಣ್ಣ ಅವರಿಗೆ ತುಮಕೂರು ಜಿಲ್ಲೆಯ ಜನತೆ ಧನ್ಯವಾದಗಳನ್ನು ಅರ್ಪಿಸುತ್ತದೆ.

ಮೋದಿ ಅವರ ಕನಸು ನಮ್ಮಲ್ಲಿರುವ ಬಡತನದ ಮಟ್ಟವನ್ನು ಮತ್ತೂಕಡಮೆ ಮಾಡಲು, ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಿಸಲು, ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳ ಕೌಶಲದ ಮಟ್ಟವನ್ನು ಉತ್ತಮಗೊಳಿಸಲು, ಮಹಿಳೆಯರಲ್ಲಿ ಸುಮಾರು ಶೇಕಡ 70ರಷ್ಟು ಮಂದಿಯನ್ನು ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಲು, ದೇಶದ ಅನ್ನದಾತರಾದ ರೈತರನ್ನು ವಿಶ್ವದ ಅನ್ನದಾತರನ್ನಾಗಿಸಲು ಉತ್ತಮ ಅಡಿಪಾಯವನ್ನು ಈ ಆಯವ್ಯಯವು ಹಾಕಲಿದೆ. ದೇಶದಲ್ಲಿ ಸುಪ್ತವಾಗಿರುವ ಅಭಿವೃದ್ಧಿಯ ಶಕ್ತಿಯನ್ನು ಉತ್ತಮವಾಗಿ ಬಳಸಿಕೊಳ್ಳಲು ಮತ್ತು ವಿಶ್ವದ ಆರ್ಥಿಕರಂಗದಲ್ಲಿ ಮೂರನೆಯ ಸ್ಥಾನಕ್ಕೆ ಏರುವ ನಮ್ಮ ಪ್ರಧಾನಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರ ಕನಸನ್ನು ನನಸಾಗಿಸುವ ಹಾದಿಯನ್ನು ಸುಗಮಗೊಳಿಸಲು ಇದರಲ್ಲಿ ಸೂಚಿಸಿರುವ ಕ್ರಮಗಳು ಸಹಾಯವಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿಯೇ, ಇದನ್ನು ನಾವು ಯುಗಪರಿವರ್ತನೆಯ ನಿಟ್ಟಿನಲ್ಲಿ ನಮ್ಮ ಕೇಂದ್ರ ಸರ್ಕಾರವು ಇರಿಸಿರುವ ಒಂದು ದೊಡ್ಡ ಹಾಗೂ ಉತ್ತಮ ಹೆಜ್ಜೆಯೆಂದು ಹೇಳಬಹುದಾಗಿದೆ.

ಇದಕ್ಕಾಗಿ 'ಶ್ರೀದೇವಿ ಅಂತರಂಗ'ವು ಭಾರತ ಸರ್ಕಾರದ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರನ್ನೂ, ಅವರಿಗೆ ಶಕ್ತಿಕೇಂದ್ರವಾಗಿರುವ ಪ್ರಧಾನಮಂತ್ರಿ ಮಾನ್ಯನರೇಂದ್ರ ಮೋದಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

# ಶ್ರೀದೇವಿ ಆಸ್ಪತ್ರೆ ನಾಡಿನ ಅಮೂಲ್ಯ ಆಸ್ತಿ

▸▸ ಮೊದಲನೇ ಪುಟದಿಂದ

ಇದೇ ಸಂದರ್ಭದಲ್ಲಿ ಡಾ ಕೆ.ಆರ್. ಕಮಲೇಶ್ ಅವರು ಕನ್ನಡದಲ್ಲಿ ಬರೆದಿದ್ದ ಡಾ.ಎಂ.ನಾಗರಾಜ್ ಜೀವನ ಚರಿತ್ರೆಯನ್ನು "A Beacon of Light Dedicated to Srevice - Acharya Dr. M. Nagaraju`s Life Mission" ಹೆಸರಿನಲ್ಲಿ ಡಿ.ಆರ್.ಡಿಸೋಜಾ ಇಂಗ್ಲೀಷ್‌ಗೆ ಅನುವಾದ ಮಾಡಿದ್ದು, ಇದನ್ನು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಲೋಕಾರ್ಪಣೆ ಮಾಡಿದರು.

ಸಮಾರಂಭದಲ್ಲಿ ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್‌ಬಾಬು, ಜಪಾನಿನ ಸಿಮಾಂಜೋ ಕಂಪನಿಯ ಭಾರತೀಯ ವ್ಯಾಪಾರ ಅಭಿವೃದ್ಧಿಯ ವ್ಯವಸ್ಥಾಪಕರಾದ ಉಯಾಮಾ ಡೈಕಿ ಮತ್ತು ಭಾರತೀಯ ಗವರ್ನಲ್ ಮ್ಯಾನೇಜರ್ (ಸೇಲ್ಸ್) ರಾಜೀವ್ ಝಾ, ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ.ರಮಣ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್.ಪಾಟೀಲ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಎಲ್. ಹರೇಂದ್ರ ಕುಮಾರ್, ಡಾ.ಲಾವಣ್ಯ ರಮಣ, ಹಾಗೂ ಹೃದಯ ರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಎಸ್. ಸುರೇಶ್ ಅವರುಗಳು ಭಾಗವಹಿಸಿದ್ದರು.

▪ ವರದಿ: ಕೆ.ಎಸ್. ರಾಜಮನ್ನಾರ್

# ಔಷಧ ತಯಾರಿಕಾ ಕ್ಷೇತ್ರದಲ್ಲಿ ಎಐ(AI) ಹೊಸ ಕ್ರಾಂತಿ



▪ **ಕೆ.ಎಸ್. ರಾಜಮನ್ನಾರ್**
**ಹಿರಿಯ ಪತ್ರಕರ್ತರು**

ಕಳೆದ ಎರಡು ದಶಕಗಳಲ್ಲಿ ಜಾಗತಿಕ ಔಷಧ ಉದ್ಯಮ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿದೆ. ಭಾರತೀಯ ಔಷಧ ಉದ್ಯಮದ ಒಟ್ಟು ಮೌಲ್ಯ 50 ಶತಕೋಟಿ ಡಾಲರನ್ನು ಮುಟ್ಟಿದ್ದು 2030ರ ವೇಳೆಗೆ ಅದು 130 ಶತಕೋಟಿ ಡಾಲರನ್ನು ಮೀರುವ ನಿರೀಕ್ಷೆಯಿದೆ. ತುಮಕೂರಿನ ಶ್ರೀದೇವಿ ಔಷಧವಿಜ್ಞಾನ ಮಹಾವಿದ್ಯಾಲಯ ವತಿಯಿಂದ "ನಿರ್ದಿಷ್ಟ ಜಾಗಕ್ಕೆ ಔಷಧಿ ಒಳಪೂರಣಗೊಳಿಸುವಲ್ಲಿ ಇತ್ತೀಚಿನ ಒಳನೋಟಗಳು ಮತ್ತು ಬೆಳವಣಿಗೆ" ಕುರಿತು ಜರುಗಿದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಹಲವು ಸಂಪನ್ಮೂಲ ವ್ಯಕ್ತಿಗಳು ಈ ವಲಯದ ಬೆಳವಣಿಗೆ, ಭವಿಷ್ಯದ ಮಾರುಕಟ್ಟೆ ವಿಸ್ತರಣೆ, ಉದ್ಯೋಗಲಭ್ಯತೆ, ದೇಶದ ಜಿಡಿಪಿಗೆ ಕೊಡಬಹುದಾದ ಕೊಡುಗೆ, ನಮ್ಮ ಔಷಧ ತಯಾರಿಕಾ ಕಂಪನಿಗಳ ಸಾಮರ್ಥ್ಯ ಇವೆಲ್ಲವೂ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದರೆ ಭಾರತವು ಔಷಧ ತಯಾರಿಕಾ ಕ್ಷೇತ್ರದಲ್ಲಿ ಅಗ್ರಗಣ್ಯ ರಾಷ್ಟ್ರವಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಕೋವಿಡ್ ಸಾಂಕ್ರಾಮಿಕದ ಸಂಕಟದ ಅವಧಿಯಲ್ಲಿ ದೇಶದ ಔಷಧ ತಯಾರಿಕರ ಮತ್ತು ವೈದ್ಯಕೀಯ ಕ್ಷೇತ್ರದ ಸಾಮರ್ಥ್ಯ ಏನೆಂಬುದು ಇಡೀ ಜಗತ್ತಿಗೇ ಮನವರಿಕೆಯಾಗಿದೆ ಎಂಬ ತಮ್ಮ ಅಭಿಪ್ರಾಯವನ್ನು ತಜ್ಞರು ಈ ವಿಚಾರ ಸಂಕಿರಣದಲ್ಲಿ ಹಂಚಿಕೊಂಡರು.

**ಡಾ. ಸುರೇಶ್ ವಿ ಕುಲಕರ್ಣಿ, ಪ್ರಾಂಶುಪಾಲರು, ಶ್ರೀಸಿದ್ದಗಂಗಾ ಫಾರ್ಮಸಿ ಕಾಲೇಜು**

ಕೃತಕ ಬುದ್ಧಿಮತ್ತೆಯ (ಎ.ಐ) ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಹೊಸ ಔಷಧಿಗಳನ್ನು ಶೀಘ್ರವೇ ತಯಾರಿಸಬಹುದಾಗಿದ್ದು ಇದು ವೈದ್ಯಕೀಯ ಲೋಕಕ್ಕೆ ವರದಾನವಾಗಿದೆ ಎಂದು ಶ್ರೀಸಿದ್ದಗಂಗಾ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ. ಸುರೇಶ್ ವಿ. ಕುಲಕರ್ಣಿ ಅಭಿಪ್ರಾಯ ಪಟ್ಟಿದ್ದಾರೆ. ರೋಗಿಯ ಯಾವ ಭಾಗದಲ್ಲಿ ನೋವು, ತೊಂದರೆ ಇದೆಯೋ ಅಂತಹ ಭಾಗಕ್ಕೆ ಮಾತ್ರ ನೇರವಾಗಿ ಔಷಧ ಕೊಡುವುದರಿಂದ ಬಹಳ ಬೇಗ ಗುಣಮುಖರಾಗಲು ಇದರಿಂದ ಅನುಕೂಲವಾಗುತ್ತದೆ. ಇದು ರೋಗಿಯ ಆರೋಗ್ಯಕರ ಜೀವಕೋಶಗಳ ಮೇಲೆ ಯಾವುದೇ ಅಡ್ಡ ಪರಿಣಾಮವನ್ನು ಬೀರುವುದಿಲ್ಲ. ಹಿಂದೆ ಹೊಸ ಔಷಧಿಗಳನ್ನು ತಯಾರುಮಾಡಲು ಕನಿಷ್ಠ 10–15 ವರ್ಷಗಳ ಸಮಯ ಬೇಕಾಗುತ್ತಿತ್ತು. ಆದರೆ ಔಷಧ ತಯಾರಿಕಾ ವಲಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಬಹಳ ಕಡಿಮೆ ಅವಧಿಯಲ್ಲಿ ಹೊಸ ಔಷಧಗಳನ್ನು ತಯಾರಿಸಬಹುದಾಗಿದೆ.

ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದಿಂದ ವೈದ್ಯಕೀಯ ಲೋಕದಲ್ಲಿ ಹೊಸ ಕ್ರಾಂತಿಯಾಗಲಿದೆ. ಇದು ವರವಾಗಿ, ಹೊಸಇತಿಹಾಸ ನಿರ್ಮಿಸಲಿದೆ. ಇದರ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಗಮನಹರಿಸಬೇಕು ಮತ್ತು ಸಂಶೋಧನೆಗೂ ಮುಂದಾಗಬೇಕು ಎಂದರು.

**ಎಂ ಎಸ್ ಪಾಟೀಲ್, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರು, ಶ್ರೀದೇವಿ ಸಮೂಹ ಸಂಸ್ಥೆಗಳು**

ಔಷಧ ತಯಾರಿಕಾ ವಲಯ ದೊಡ್ಡ ಮಟ್ಟದಲ್ಲಿ ಉದ್ಯೋಗ ನೀಡುತ್ತಿದೆ ದೇಶದ ಜಿ.ಡಿ.ಪಿ.ಯ ಬೆಳವಣಿಗೆಗೂ ಗಮನಾರ್ಹ ಕೊಡುಗೆ ನೀಡುತ್ತಿದೆ; ಹೀಗಾಗಿ ಫಾರ್ಮಸಿ ಕೋರ್ಸ್‌ಗಳಿಗೆ ಭವಿಷ್ಯದಲ್ಲಿ ದೇಶದ ಒಳಗೆ ಮತ್ತು ಹೊರಗೆ ಬಹಳ ಬೇಡಿಕೆಯಿದೆ. ಭಾರತೀಯ ಔಷಧ ತಯಾರಿಕಾವಲಯ ಕೋವಿಡ್ ಕಾಲಘಟ್ಟದಲ್ಲಿ ಮಾಡಿದ ಉತ್ತಮ ಕಾರ್ಯಗಳನ್ನು ಇಡೀ ವಿಶ್ವವೇ ಮೆಚ್ಚಿದೆ. ದೇಶಕ್ಕೆ ಮಾತ್ರವಲ್ಲದೇ ಜಗತ್ತಿಗೆ ಔಷಧ ಪೂರೈಸುವ ಮೂಲಕ ಭಾರತೀಯ ಔಷಧ ತಯಾರಕರು ಮೌನ ಸೈನಿಕರಂತೆ ತೆರೆಯ ಹಿಂದೆ ಮಾಡಿದ ಕೆಲಸ ಇತಿಹಾಸದ ಪುಟದಲ್ಲಿ ಅಚ್ಚಳಿಯದೆ ಉಳಿಯಲಿದೆ.




## ಹೆಚ್ಚಿನ ಜನಜಾಗೃತಿ ಅಗತ್ಯ

**ಔಷಧಕ್ಷೇತ್ರ ನಿಂತ ನೀರಲ್ಲ, ಅಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿರುತ್ತವೆ. ಔಷಧ ತಯಾರಿಕಾವಲಯ ವಿಶಾಲವಾಗಿದ್ದು ಯುವಕರು ಹೆಚ್ಚು ಉದ್ಯೋಗಾವಕಾಶಗಳನ್ನು ಇದರಲ್ಲಿ ಕಂಡುಕೊಳ್ಳಬಹುದಾಗಿದೆ. ರಾಜ್ಯದಲ್ಲಿ 35ಸಾವಿರಕ್ಕೂ ಹೆಚ್ಚು ಮೆಡಿಕಲ್ ಶಾಪ್‌ಗಳಿವೆ. ಔಷಧ ಬಳಕೆ ಕುರಿತು ವೈದ್ಯಕೀಯ ಸಮುದಾಯ ಜನರನ್ನು ಹೆಚ್ಚು ಜಾಗೃತಗೊಳಿಸಬೇಕಿದೆ. ಇಂತಹ ಕಾರ್ಯಾಗಾರಗಳು ಈ ವಿಷಯದಲ್ಲಿ ಬೆಳಕು ಚೆಲ್ಲಲು ಸಹಕಾರಿಯಾಗಲಿದೆ. ವೈದ್ಯರ ಸಲಹೆ, ಸೂಚನೆ ಇಲ್ಲದೆ ಯಾವ ಔಷಧವನ್ನೂ ಬಳಸಬಾರದು. ಔಷಧ ವಿತರಕರ ಮೇಲೆ ಕೂಡ ಹೆಚ್ಚಿನ ಜವಾಬ್ದಾರಿಗಳಿವೆ. ನ್ಯಾನೋ ತಂತ್ರಜ್ಞಾನದಿಂದಲೂ ಕೆಲವು ಔಷಧಿಗಳು ತಯಾರಾಗುತ್ತಿವೆ. ಕೆಲವು ಔಷಧಿಗಳನ್ನು ಚರ್ಮದ ಮೇಲೆ ಪಟ್ಟು ಹಾಕಿದರೆ ಅವು ತಾನಾಗಿಯೇ ಕರಗಿ, ಸೇರಬೇಕಾದ ಸ್ಥಳವನ್ನು ಸೇರಲಿವೆ. ನಿರ್ದಿಷ್ಟ ನೋವಿಗೆ ಮತ್ತು ಜಾಗಕ್ಕೆ ಔಷಧಿಯನ್ನು ನೇರವಾಗಿ ಕೊಡುವುದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲದೆ ಬೇಗ ಚೇತರಿಸಿಕೊಳ್ಳಲು ಸಹಾಯವಾಗಲಿದೆ ಎಂದು ಶ್ರೀದೇವಿ ಸಮೂಹ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅಭಿಪ್ರಾಯಪಟ್ಟಿದ್ದಾರೆ.**

ಕೋವಿಡ್ ಕಾಲಘಟ್ಟದಲ್ಲಿ ನಮ್ಮ ವೈದ್ಯಕೀಯ ಸಮುದಾಯದ ಶಕ್ತಿ, ಸಾಮರ್ಥ್ಯ ಇಡೀ ಜಗತ್ತಿನ ಅರಿವಿಗೆ ಬಂದಿತು. ಖಾಸಗಿಯವರು ಈ ವಲಯದಲ್ಲಿ ಬಹಳ ದೊಡ್ಡಮಟ್ಟದಲ್ಲಿ ಬಂಡವಾಳ ಹೂಡುತ್ತಿದ್ದಾರೆ. ಮೂಲಸೌಕರ್ಯಗಳು ಅಭಿವೃದ್ಧಿಗೊಳ್ಳುತ್ತಿವೆ. ಇದರಿಂದ ವಿದೇಶಿಯರು ಹೆಚ್ಚಿನ ಮಟ್ಟದಲ್ಲಿ ಭಾರತಕ್ಕೆ ಬಂದು ಉತ್ತಮ ಚಿಕಿತ್ಸೆ ಪಡೆಯುವ ಅವಕಾಶ ಇನ್ನೂ ಹೆಚ್ಚಾಗುತ್ತದೆ. ದೇಶದ ಒಳಗೆ ಮತ್ತು ದೇಶದ ಹೊರಗೆ ಭಾರತೀಯ ಪರಿಣತ ಮತ್ತು ತಜ್ಞ ವೈದ್ಯರ ಪರಿಶ್ರಮ, ಸಾಧನೆಗಳು ಜಗತ್ತಿನ ಕಣ್ಣು ತೆರೆಸುತ್ತಿವೆ. ಜಾಗತಿಕ ಮಟ್ಟದಲ್ಲಿ ಸುದ್ದಿಯಾಗುತ್ತಿದೆ.

ಪ್ರಸ್ತುತ ನಮ್ಮ ದೇಶವು ಔಷಧಗಳ ರಫ್ತು ವಲಯದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದು, ಉದ್ಯೋಗ ನೀಡುವಲ್ಲಿ ಮೂರನೇ ಸ್ಥಾನದಲ್ಲಿದೆ. ಎಂದು ಅವರು ವಿವರಿಸಿದರು.

**ಡಾ. ಬಿ.ಎಲ್.ಆರ್. ಮಾಧವಿ, ಪ್ರಾಂಶುಪಾಲರು, ಧನ್ವಂತರಿ ಫಾರ್ಮಸಿ ಕಾಲೇಜು ಬೆಂಗಳೂರು**

ವೈಯಕ್ತಿಕ ಬಳಕೆಯ ಮತ್ತು ನಿಖರವಾದ ಉತ್ಪನ್ನಗಳಂತಹ ಜೈವಿಕ ಔಷಧಗಳ ಅಭಿವೃದ್ಧಿಯಲ್ಲಿ ಆಗಿರುವ ಗಣನೀಯ ಹೆಚ್ಚಳವನ್ನು ಡಾ. ಬಿ.ಎಲ್.ಆರ್. ಮಾಧವಿ ಪ್ರಮುಖವಾಗಿ ಪ್ರಸ್ತಾಪಿಸಿದರು. ನಿಖರವಾದ ಔಷಧಿಗಳು ಅಗತ್ಯವಿರುವ ಕಡೆಗಳಲ್ಲಿ ಆವಶ್ಯಕತೆಗೆ ತಕ್ಕ ಪ್ರಮಾಣದಲ್ಲಿ ಬಳಸಿದರೆ, ಅವು ಕ್ಯಾನ್ಸರ್, ಕ್ಯಾನ್ಸರ್‌ನಿಂದ ಅಥವಾ ಇನ್ನಿತರ ಕಾರಣಗಳಿಂದ ಉಂಟಾಗುವ ರಕ್ತಸಂಬಂಧಿ ರೋಗಗಳು, ಸ್ವಯಂನಿರೋಧಕ ವ್ಯವಸ್ಥೆಯಲ್ಲಿ ಉಂಟಾಗುವ ಏರುಪೇರುಗಳು ಮತ್ತು ಇತರ ಅಪರೂಪದ ದೈಹಿಕ ಕಾಯಿಲೆಗಳನ್ನು ಪರಿಣಾಮಕಾರಿಯಾಗಿ ಗುಣಪಡಿಸುತ್ತವೆ. ತಂತ್ರಜ್ಞಾನದ ಪ್ರಗತಿಯಿಂದಾಗಿ, ಇಂತಹ ಔಷಧಿಗಳ ಉತ್ಪಾದನೆಯಲ್ಲಿ ಅದ್ಭುತವಾದ ಸುಧಾರಣೆಯಾಗಲಿವೆ ಮತ್ತು ಈ ಕಾರಣದಿಂದ, ಮುಂದೆ ಬರುವ ಔಷಧಿಗಳು ಜೈವಿಕ ಉತ್ಪನ್ನಗಳಾಗಿರುತ್ತವೆ ಎಂದು ಅವರು ಹೇಳಿದರು.

**ಡಾ. ಎಸ್.ಸಿ. ಮಾರಾಪುರ್, ಪ್ರಾಧ್ಯಾಪಕರು, ಬಿ.ಎಲ್.ಡಿ.ಟಿ. ಶಿಕ್ಷಣ ಸಂಸ್ಥೆ, ವಿಜಯಪುರ**

ಡಾ. ಮಾರಾಪುರ್ ಅವರು ಔಷಧಿಗಳಿಗೆ ಆವಶ್ಯಕವಾಗಿರುವ ಸೂತ್ರಗಳ ಅಭಿವೃದ್ಧಿಯ ಅಗತ್ಯವನ್ನು ಮತ್ತು ಅವುಗಳನ್ನು ಬಳಸಬೇಕಾದ ಪ್ರಮಾಣಗಳನ್ನು ನಿಗದಿಪಡಿಸಬೇಕಾದ ಅಗತ್ಯಗಳಿಗೆ ಪ್ರಾಮುಖ್ಯವನ್ನು ನೀಡಬೇಕಾದ ಅಗತ್ಯವನ್ನು ಅವರು ತಿಳಿಸಿದರು. ಹಾಗೂ, ಇವುಗಳ ವಿಷಯದಲ್ಲಿ ಅನುಸರಿಸಬೇಕಾದ ನಿಯಂತ್ರಣಗಳ ಮಾನದಂಡಗಳು ಹೇಗಿರಬೇಕು ಎಂಬುದನ್ನೂ ಅವರು ವಿವರಿಸಿದರು. ಸಾಂಪ್ರದಾಯಿಕ ಔಷಧಿಗಳನ್ನು ಬಳಸುವ ವಿಧಾನದಲ್ಲಿರುವ ಮಿತಿಗಳನ್ನು ನಿವಾರಿಸಲು ನೇರ ಸೇವನೆಯ ನವೀನ ಔಷಧಿಗಳನ್ನು ಬಳಸುವ ವಿಧಾನಗಳಲ್ಲಿ ಅನೇಕ ಸಂಶೋಧನೆಗಳು ವೇಗವಾಗಿ ನಡೆಯುತ್ತಿವೆ ಮತ್ತು ಮುಂಬರುವ ವರ್ಷಗಳಲ್ಲಿ ಬೈಲೇಯರ್ (ಎರಡು ಪದರಗಳಲ್ಲಿ ಅಣುಗಳನ್ನು ಒತ್ತೊತ್ತಾಗಿರುವಂತೆ ಅಳವಡಿಸಿದ) ಮಾತ್ರೆಗಳು, ಗಾತ್ರದಲ್ಲಿ ಚಿಕ್ಕದಾದ (ಮಿನಿ) ಮಾತ್ರೆಗಳು, ಇನ್‌ಲೇಮಾತ್ರೆಗಳು, ಲಾಲಿಪಪ್ (ಬಾಯಿಯಲ್ಲಿಯೇ ಕರಗುವಂತಹ) ಮಾತ್ರೆಗಳು, ಪ್ಯಾಸ್ಟಿಲ (ಚೀಪಬಹುದಾದ) ಮಾತ್ರೆಗಳು, ಗಮಿಬೇರ್ (ಚೀಪಬಹುದಾದ ಪೌಷ್ಟಿಕಾಂಶಗಳನ್ನುಳ್ಳ ಮಾತ್ರೆಗಳು), ಬಾಯಿಯಲ್ಲಿನ ಲಾಲಾರಸವು ಸೋಕಿದೊಡನೆ ಕರಗಿ ದೇಹದೊಳಕ್ಕೆ ಸೇರಿಕೊಳ್ಳುವ ಓರಲ್ ಡಿಸಿಂಟಿಗ್ರೇಟಿಂಗ್ ಫಿಲ್ಮಗಳಂತಹ ನವೀನ ಮಾದರಿಯ ಮಾತ್ರೆಗಳು ಲಭ್ಯವಿರಲಿವೆ ಎಂಬುದನ್ನೂ ಅವರು ತಿಳಿಸಿದರು. ಕುಕ್ಷಿ ಮತ್ತು ಸಣ್ಣಕರುಳಿಗೆ ನೇರವಾಗಿ ತಲುಪಿ ಶೀಘ್ರವಾಗಿ ಪರಿಣಾಮವನ್ನುಂಟುಮಾಡುವ ರೋಬೋಟಿಕ್ ಮಾತ್ರೆಗಳ ವಿನ್ಯಾಸ ಹಾಗೂ ಅವುಗಳನ್ನು ಮೂರು ಆಯಾಮಗಳಲ್ಲಿ ಮುದ್ರಿಸಲು ಅನುಕೂಲವಾಗುವಂತಹ ಸುಧಾರಿತ ತಂತ್ರಜ್ಞಾನದ ವೀಡಿಯೋ ಪ್ರದರ್ಶನವನ್ನು ಅವರು ಪ್ರಸ್ತುತ ಪಡಿಸಿದರು.

**ಶ್ರೀರಾಮಚಂದ್ರ ಗಾಣಿಗ, ಸಂಪನ್ಮೂಲವ್ಯಕ್ತಿ, ಕರ್ನಾಟಕ ಆಂಟಿಬಯೋಟಿಕ್ ಮತ್ತು ಫಾರ್ಮಸಿಟಿಕಲ್(ಲಿ)**

ಕಳಪೆ ಗುಣಮಟ್ಟದ ಔಷಧಿ ತಯಾರಿಸಿ ಮಾರಾಟ ಮಾಡುವವರ ವಿರುದ್ಧ ರಾಜ್ಯ ಔಷಧ ನಿಯಂತ್ರಣ ಇಲಾಖೆ ಕ್ರಮಗಳನ್ನು ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರ ಹೊಂದಿದೆ. ಇಂತಹ ಸಮಸ್ಯೆಗಳಿಂದ ಬಾಧಿತರಾದವರು ಡ್ರಗ್ಸ್ ಅಂಡ್ ಕಾಸ್ಮೆಟಿಕ್ ಕಾಯಿದೆ (ಕೇಂದ್ರ ಕಾಯಿದೆ) ಮೂಲಕ ಕಾನೂನು ಕ್ರಮವನ್ನು ಜರುಗಿಸಬಹುದಾಗಿದೆ. ದೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಹಾಗೂ ರಾಜ್ಯದಲ್ಲಿ 500ಕ್ಕೂ ಹೆಚ್ಚು ಔಷಧ ತಯಾರಿಕಾ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ಮಾರುಕಟ್ಟೆ ಮೌಲ್ಯ ದಿನೇ, ದಿನೇ ಹೆಚ್ಚಾಗುತ್ತಿದೆ ಮತ್ತು ಅವು ಆದಾಯಗಳಿಕೆ ಹಾಗೂ ಉದ್ಯೋಗ ನೀಡಿಕೆಯಲ್ಲೂ ಪ್ರಮುಖ ಪಾತ್ರವನ್ನು ವಹಿಸುತ್ತಿವೆ ಎಂದರು.

**ಡಾ.ಬಿ.ಗೋಪಾಲಕೃಷ್ಣ, ಪ್ರಾಂಶುಪಾಲರು, ಶ್ರೀದೇವಿ ಫಾರ್ಮಸಿ ಕಾಲೇಜು**

'ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣದಲ್ಲಿ ವ್ಯರ್ಥವಿಷಯಗಳನ್ನು ನೋಡುತ್ತಾ ಅದರಲ್ಲಿಯೇ ಮುಳಗದೆ ಅಧ್ಯಯನದ ಕಡೆಗೆ ಹೆಚ್ಚು ಗಮನಕೊಡಬೇಕು' ಎಂದು ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಿ. ಗೋಪಾಲಕೃಷ್ಣ ಕಿವಿಮಾತು ಹೇಳಿದರು.

### ಭವಿಷ್ಯದ ಮಾರುಕಟ್ಟೆ

2025ರಲ್ಲಿ ಭಾರತದ ಔಷಧ ಮಾರುಕಟ್ಟೆಯ ನಿರೀಕ್ಷಿತ ಆದಾಯ 13.85 ಶತಕೋಟಿ ಡಾಲರ್ ತಲುಪುವ ಗುರಿಯಿದೆ. ಔಷಧೀಯ ಉದ್ಯಮದ ಮಾರುಕಟ್ಟೆಯಲ್ಲಿ ಅತಿದೊಡ್ಡ ಪಾಲು ಆಂಕೊಲಾಜಿ ಡ್ರಗ್ಸ್‌ನದಾಗಿದ್ದು, ಇದು 2025ರಲ್ಲಿ 1.98 ಶತಕೋಟಿಯಷ್ಟಾಗುವ ನಿರೀಕ್ಷೆಯಿದೆ. 2029 ರವೇಳೆಗೆ ಉದ್ಯಮದ ಆದಾಯ ಶೇಕಡ 5.8ರ ವಾರ್ಷಿಕ ಬೆಳವಣಿಗೆ (ಸಿಎಜಿಆರ್ 2025–2029) ಸಾಧಿಸುವ ನಿರೀಕ್ಷೆಯಿದೆ ಎಂದು ವರದಿಯಾಗಿದೆ. ಭಾರತದ ಔಷಧ ಮಾರುಕಟ್ಟೆಯಲ್ಲಿ ಜೆನೆರಿಕ್ ಔಷಧಿಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಭಾರತದಲ್ಲಿ ಔಷಧಗಳ ಆಮದು, ಉತ್ಪಾದನೆ, ವಿತರಣೆ ಮತ್ತು ಮಾರಾಟ ನಿಯಂತ್ರಿಸಲು ಸರ್ಕಾರ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯನ್ನು The Central Drugs Standard Control Organisation (CDSCO) ಸ್ಥಾಪಿಸಿದೆ. ಎಲ್ಲಾ ಔಷಧಿಗಳು ಸುರಕ್ಷತೆ, ಪರಿಣಾಮಕಾರಿ ಮತ್ತು ಗುಣಮಟ್ಟದ ಮಾನದಂಡಗಳನ್ನು ಪೂರೈಸಲಿವೆ ಎಂಬುದನ್ನು CDSCO ಖಚಿತಪಡಿಸಲಿದೆ. ದೇಶದಲ್ಲಿ ಹೆಚ್ಚಿನ ಸಂಖ್ಯೆಯ ಸಣ್ಣ ಮತ್ತು ಮಧ್ಯಮ ಗಾತ್ರದ ಔಷಧ ತಯಾರಿಕಾ ಕಂಪನಿಗಳು ಸ್ಥಳೀಯ ಮಾರುಕಟ್ಟೆಗೆ ಕೈಗೆಟುಕುವ ಔಷಧಗಳ ತಯಾರಿಕೆಯತ್ತ ಗಮನಹರಿಸಿವೆ ಎಂಬುದು ವಿಶೇಷ.

**ಹೆಚ್ಚು ಕಡಮೆ ಎನ್ನುವಂತೆ, ಪ್ರತಿದಿನವೂ ನಾವು ಹೆಣ್ಣು ಭ್ರೂಣಹತ್ಯೆಯ ಸುದ್ದಿಯನ್ನು ಕೇಳುತ್ತಿರುತ್ತೇವೆ. ದೇಶದ ಕಾನೂನು ಭ್ರೂಣಹತ್ಯೆಯನ್ನು, ಅದರಲ್ಲಿಯೂ ಹೆಣ್ಣು ಭ್ರೂಣಹತ್ಯೆಯನ್ನು ಮತ್ತು ಜನನಪೂರ್ವದಲ್ಲಿ ಭ್ರೂಣದ ಲಿಂಗಪರೀಕ್ಷೆಯನ್ನು ಮಾಡುವುದನ್ನು ನಿಷೇಧಿಸಿದೆ ಎಂಬುದೇನೋ ನಿಜ. ಆದರೂ, ದೇಶದ ವಿವಿಧ ಭಾಗಗಳಲ್ಲಿ ಈ ಕ್ರೂರಹತ್ಯೆಯ ವಿಷಸರ್ಪವು ಹೆಡೆಯನ್ನು ಎತ್ತುತ್ತಲೇ ಇರುತ್ತದೆ.**

# ಹೆಣ್ಣುಮಕ್ಕಳ ಸಬಲೀಕರಣ ಹಾಗೂ ಸೈಬರ್ ಅಪರಾಧಗಳಿಂದ ರಕ್ಷಣೆ

**ಡಾ. ಮನೋನ್ಮಣಿ ಹುಲಿನಾಯ್ಕರ್**
**ಗ್ಯಾಸ್ಟ್ರೋಎಂಟರಾಲೊಜಿಸ್ಟ್, ಶ್ರೀದೇವಿ ಆಸ್ಪತ್ರೆ**
**ಐ.ಎಂ.ಎ.ನ ಮಹಿಳಾ ಘಟಕದ ಅಧ್ಯಕ್ಷರು**




ಇತ್ತೀಚೆಗೆ ತುಮಕೂರಿನಲ್ಲಿರುವ ಭಾರತೀಯ ವೈದ್ಯಕೀಯ ಸಂಸ್ಥೆಯ ಮಹಿಳಾ ವೈದ್ಯರ ವಿಭಾಗವು ಏರ್ಪಡಿಸಿದ್ದ 'ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆಯ' ಸಂದರ್ಭದಲ್ಲಿ ಪ್ರೊ. ಸಿಬಂತಿ ಪದ್ಮನಾಭ ಅವರು 'ಸೈಬರ್ ಅಪರಾಧಗಳು ಮತ್ತು ಅವುಗಳಿಂದ ರಕ್ಷಣೆ' ಎಂಬ ವಿಷಯದ ಮೇಲೆ ಮಾಡಿದ ಭಾಷಣವು ಈ ದಿನಾಚರಣೆಯನ್ನು ಕುರಿತಂತೆ ನನ್ನನ್ನು ತೀವ್ರ ಚಿಂತನೆಗೆ ಒಡ್ಡಿತು. ಆದರೆ ನಾನು ಸಭಾಕಂಪದಿಂದಾಗಿ ಅಂದು ಸಭೆಯಲ್ಲಿ ಈ ವಿಷಯವನ್ನು ಕುರಿತು ನನ್ನ ಅಭಿಪ್ರಾಯಗಳನ್ನು ತಿಳಿಸಲಾಗಲಿಲ್ಲ. ಆದರೂ ನನ್ನ ಅಭಿಪ್ರಾಯಗಳ ಮತ್ತು ಅವುಗಳಿಂದಾದ ಹೊಯ್ದಾಟದ ಭಾರವನ್ನು ಮನಸ್ಸಿನಿಂದ ಇಳಿಸಿಕೊಳ್ಳುವ ಅನಿವಾರ್ಯತೆಯು ನನ್ನಲ್ಲಿತ್ತು. ಅದನ್ನು ಕುರಿತು ಮತ್ತೆ ಮತ್ತೆ ಮಂಥನವನ್ನು ನಡೆಸಿದೆ. ಒಮ್ಮೆ ಅವುಗಳು ಒಂದು ಸ್ಪಷ್ಟರೂಪವನ್ನು ಪಡೆದುಕೊಂಡ ಮೇಲೆ ನಾನು ಅವೆಲ್ಲವನ್ನೂ ಬರಹದ ರೂಪದಲ್ಲಿ ಜನಗಳ ಮುಂದೆ ಇಡಬೇಕೆಂಬ ತೀರ್ಮಾನಕ್ಕೆ ಬಂದೆ. ಅದರ ಪರಿಣಾಮವೇ ಈ ಲೇಖನ.

ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆಯನ್ನು ನಾವು ಏಕೆ ಆಚರಿಸಬೇಕು? ಇದು ನಾವು ನಮಗೆ ಕೇಳಿಕೊಳ್ಳಬೇಕಾದ ಪ್ರಶ್ನೆ. ನಮ್ಮ ಭಾರತದೇಶದಲ್ಲಿ ನಾವು ಆರಾಧಿಸುವ ದೇವಾನುದೇವತೆಗಳಲ್ಲಿ ಬಹುತೇಕ ಸ್ತ್ರೀ ದೇವತೆಗಳಿವೆ. ನಮ್ಮ ಪುರಾಣಗಳಲ್ಲಿ ಈ ಸ್ತ್ರೀ ದೇವತೆಗಳು ಮಾತೃರೂಪಿಣಿಯರು ಮತ್ತು ಶಕ್ತಿಸ್ವರೂಪಿಣಿಯರು ಹಾಗೂ ಅವರು ಪುರುಷ ದೇವತೆಗಳು ನಾಶಪಡಿಸಲು ಅಸಾಧ್ಯವೆಂದು ಪರಿಗಣಿಸಲ್ಪಟ್ಟಿದ್ದ, ಮತ್ತು ದೇವತೆಗಳನ್ನು ಋಷಿಮುನಿಗಳನ್ನು ಬಹಳವಾಗಿ ಪೀಡಿಸುತ್ತಿದ್ದ ಹಲವಾರು ದೈತ್ಯರನ್ನು ನಾಶಪಡಿಸದರು ಎಂದೆಲ್ಲಾ ವರ್ಣಿಸಲಾಗಿದೆ. ವಾತ್ಸಲ್ಯಮಯಿಯರಾದ ಈ ಮಾತೃಶಕ್ತಿ ದೇವತೆಗಳು ಹಲವಾರು ಸಂದರ್ಭಗಳಲ್ಲಿ ರೌದ್ರಶಕ್ತಿಯನ್ನು ತಮ್ಮಲ್ಲಿ ಆಹ್ವಾನಿಸಿಕೊಂಡು ಲೋಕಕಲ್ಯಾಣಕ್ಕಾಗಿ ಈ ವಿನಾಶಕಾರಿ ಶಕ್ತಿಗಳನ್ನು ನಾಶಪಡಿಸಿದ ಕಥೆಗಳನ್ನು ನಾವು ಪುರಾಣದಲ್ಲಿ ನೋಡಬಹುದು.

ಮತ್ತೆ ನಾವು ಚರ್ಚೆಮಾಡಬೇಕಾದ 'ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ'ಯನ್ನು ನಾವು ಏಕೆ ಆಚರಿಸಬೇಕು' ಎಂಬ ಪ್ರಶ್ನೆಗೆ ಬರೋಣ. ಈ ಪ್ರಶ್ನೆಗೂ ನಾವು ಮಹಿಳೆಯರನ್ನು ನೋಡುವ ಪೂಜ್ಯದೃಷ್ಟಿಗೂ ಇರುವ ಸಂಬಂಧವೇನು? ಇದಕ್ಕೆ ಉತ್ತರವನ್ನು ಕಂಡುಹಿಡಿಯುವ ಮೊದಲ ಹೆಜ್ಜೆಯಾಗಿ ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆಯ ಹಿಂದೆ ಇರುವ 'ಹೆಣ್ಣುಮಕ್ಕಳನ್ನು ಉಳಿಸಿ. ಪ್ರತಿಯೊಬ್ಬರಿಗೂ ಉತ್ತಮ ಶಿಕ್ಷಣವನ್ನು ನೀಡಿ' ಎಂಬ ಧ್ಯೇಯವಾಕ್ಯದ ಉದ್ದೇಶವನ್ನು ಅರಿತುಕೊಳ್ಳಬೇಕು. ಇಂದು ನಾವು ಈಗ ಹೆಣ್ಣುಮಕ್ಕಳನ್ನು ಉಳಿಸಿ ಎಂದು ಏಕೆ ಹೇಳುತ್ತಿದ್ದೇವೆ? ಅಲ್ಲದೆ ಯಾವ ಅಪಾಯದಿಂದ ಅವರನ್ನು ಉಳಿಸಿ ರಕ್ಷಿಸಬೇಕು? ಇಂದು ಭಾರತದಲ್ಲಿ ಸ್ತ್ರೀಯರನ್ನು ಪೂಜಿಸುವ ಪರಿಸ್ಥಿತಿಗಿಂತ ಭಿನ್ನವಾದ, ಅತಿ ಅಮಾನುಷವಾದರೂ ವಾಸ್ತವವಾದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಹೆಚ್ಚು ಕಡಮೆ ಎನ್ನುವಂತೆ, ಪ್ರತಿದಿನವೂ ನಾವು ಹೆಣ್ಣು ಭ್ರೂಣಹತ್ಯೆಯ ಸುದ್ದಿಯನ್ನು ಕೇಳುತ್ತಿರುತ್ತೇವೆ. ದೇಶದ ಕಾನೂನು ಭ್ರೂಣಹತ್ಯೆಯನ್ನು, ಅದರಲ್ಲಿಯೂ ಹೆಣ್ಣು ಭ್ರೂಣಹತ್ಯೆಯನ್ನು ಮತ್ತು ಜನನಪೂರ್ವದಲ್ಲಿ ಭ್ರೂಣದ ಲಿಂಗಪರೀಕ್ಷೆಯನ್ನು ಮಾಡುವುದನ್ನು ನಿಷೇಧಿಸಿದೆ ಎಂಬುದೇನೋ ನಿಜ. ಆದರೂ, ದೇಶದ ವಿವಿಧ ಭಾಗಗಳಲ್ಲಿ ಈ ಕ್ರೂರ ಹತ್ಯೆಯ ವಿಷಸರ್ಪವು ಹೆಡೆಯನ್ನು ಎತ್ತುತ್ತಲೇ ಇರುತ್ತದೆ. ಈ ಹತ್ಯೆಗಳ ಹಿಂದಿನ ಕೈ ಆ ಭಾವೀಮಕ್ಕಳ ತಂದೆ ತಾಯಿಗಳದ್ದೇ ಆಗಿರುವುದು ಅತ್ಯಂತ ಖೇದದ ಸಂಗತಿ. ಪೈಶಾಚಿಕ, ಅಮಾನವೀಯವೆಂದು ಕರೆಯಬಹುದಾದ ಇಂತಹ ಕೃತ್ಯಗಳು ಮೊದಮೊದಲು ನಮ್ಮ ಅರಿವಿಗೆ ಬರದಷ್ಟು ಅಪರೂಪವಾಗಿರುತ್ತವೆ. ಆದರೆ ಅವು ಸಾಂಕ್ರಾಮಿಕವಾಗಿ ತಮ್ಮ ಕರಾಳತೆಯಲ್ಲಿ ವಿಜೃಂಭಿಸುವುದಕ್ಕೆ ಹೆಚ್ಚೇನೂ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಹೆಣ್ಣು ಭ್ರೂಣಹತ್ಯೆ ನಿಜಕ್ಕೂ ರಾಕ್ಷಸೀಕೃತ್ಯ. ಇದಕ್ಕೆ ಕಾರಣ, ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿ ಮತ್ತು ಗಂಡು ಮಕ್ಕಳನ್ನು ನೋಡುವ ದೃಷ್ಟಿಗಳಲ್ಲಿ ಸಮಾನತೆ ನಮ್ಮ ಜನರಲ್ಲಿ ಇರುವುದಿಲ್ಲ. ಇದರ ಫಲವೇ, ಹೆಣ್ಣು ಮಕ್ಕಳು ಭೂಮಿಯ ಮೇಲೆ ಕಣ್ಣುಬಿಡುವ ಮೊದಲೇ ಅಂದರೆ ಅವುಗಳ ಜೀವನವನ್ನು ಜನನ ಪೂರ್ವದಲ್ಲಿಯೇ ಚಿವುಟಿ ಹಾಕಲಾಗುವಂತಹ ಹೇಯಕೃತ್ಯಗಳು. ಇದರಿಂದ ಆ ಮಕ್ಕಳ ಜೀವನವಷ್ಟೇ ಹಾಳಾಗುವುದಿಲ್ಲ, ಬದಲಿಗೆ, ಕಾಲಕಳೆದಂತೆ ಇಡೀ ಸಮಾಜದಲ್ಲಿ ಇರಬೇಕಾದ ಬೆಳವಣಿಗೆಯ ದೃಷ್ಟಿ, ಸಾಮಾಜಿಕಸ್ವಾಸ್ಥ್ಯ, ಇವುಗಳು ಮತ್ತೆ ಸುಸ್ಥಿತಿಗೆ ಮರಳಲಾರದಷ್ಟು ಹೀನದೆಸೆಗೆ ತಲುಪುತ್ತವೆ. ಆದುದರಿಂದ ಇನ್ನು ಮುಂದಾದರೂ ಇಂತಹ ಹೀನಕೃತ್ಯಗಳು ನಡೆಯದಂತೆ ಇವನ್ನು ತಡೆಯುವ ಜವಾಬ್ದಾರಿ ನಮ್ಮ ಮೇಲೆ, ಇಡೀ ಸಮಾಜದ ಮೇಲೆ ಇದೆ. ನಾವು ಈ ಜವಾಬ್ದಾರಿಯನ್ನು ನಿಭಾಯಿಸಲು ಮುಂದಾಗಬೇಕು. ಇದನ್ನು ಮಾಡಲು, ನಮ್ಮ ರೋಗಗಳ ವಿಷಯದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಪ್ರಚಲಿತವಿರುವಂತೆ, ಇದರ ಮೂಲ ಕಾರಣಗಳನ್ನು ಕಂಡುಹಿಡಿಯಬೇಕು. ಇದಕ್ಕೆ ಕಾರಣ ಕುಟುಂಬದ ಆರ್ಥಿಕ ಪರಿಸ್ಥಿತಿ ಇರಬಹುದು, ಮತ–ಪಂಥಗಳ ಕಟ್ಟುಪಾಡುಗಳಿರಬಹುದು, ಸಾಮಾಜಿಕ ಪದ್ಧತಿಗಳಿರಬಹುದು. ಕಾರಣಗಳನ್ನು ಪತ್ತೆ ಮಾಡಿದಾಗ ಮಾತ್ರ ಈ ರೋಗವು ನಮ್ಮ ನಡುವೆ ಯಾವ ಹಂತದಲ್ಲಿದೆ, ಅದು ಕೌಟುಂಬಿಕ ವ್ಯವಸ್ಥೆಯ ಮೇಲೆ ಹಾಗೂ ಸಮಾಜದ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಎಂಬುದರ ಬಗೆಗೆ ಯೋಚಿಸಬಹುದು. ಅನಂತರ, ಅದಕ್ಕೆ ನೀಡಬೇಕಾದ ಔಷಧ, ಚಿಕಿತ್ಸೆ, ತಂದೆ ತಾಯಿಗಳೊಂದಿಗೆ ಸಮಾಲೋಚನೆ, ಇಂತಹ ಕೃತ್ಯಗಳ ದುಷ್ಪರಿಣಾಮಗಳು ಮತ್ತು ಅಡ್ಡ ಪರಿಣಾಮಗಳನ್ನು ಅವರಿಗೆ ವಿವರಿಸುವುದು, ಮತ್ತು ಈ ಹಂತದಲ್ಲಿ ತೆಗೆದುಕೊಳ್ಳುವ ಪರಿಹಾರದ ಕ್ರಮಗಳು ಮುಂದೆ ಯಾವ ಬಗೆಯ ಪರಿಣಾಮವನ್ನು ಉಂಟುಮಾಡಬಹುದು ಮೊದಲಾದ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇವುಗಳಲ್ಲಿ ಯಾವ ಮಾರ್ಗವನ್ನು ಅನುಸರಿಸಿದರೂ ನಮ್ಮ ಮುಖ್ಯ ಉದ್ದೇಶ ತಂದೆತಾಯಿಗಳು ಕೈಗೊಂಡಿರುವ ಭ್ರೂಣಹತ್ಯೆಯ ನಿರ್ಧಾರವು ಅವರ ವೈಯಕ್ತಿಕ ಧರ್ಮಕ್ಕೆ, ಸಮಾಜಕ್ಕೆ, ದೇಶದ ಒಳಿತಿಗೆ ವಿರುದ್ಧವಾದುದಷ್ಟೇ ಅಲ್ಲದೆ, ಕಾನೂನಿನ ದೃಷ್ಟಿಯಿಂದಲೂ ಘೋರ ಅಪರಾಧವಾಗುತ್ತದೆ ಎಂಬುದನ್ನು ಅವರಿಗೆ ತಿಳಿಸಿ ಅವರ ಮನವೊಲಿಸಿ, ಈ ಕೃತ್ಯವನ್ನು ತಡೆಯಬೇಕು,

ಹೆಣ್ಣುಮಕ್ಕಳನ್ನು ಕೀಳಾಗಿ ನಡೆಸಿಕೊಳ್ಳುವ ಪ್ರವೃತ್ತಿ ನಮ್ಮ ಸಮಾಜದಲ್ಲಿ ಇದೆ. ಇದೊಂದು ಸಾಮಾಜಿಕ ವರ್ತನೆಯಲ್ಲಿರುವ ಸಮಸ್ಯೆ. ಅಂತಹ ಪ್ರವೃತ್ತಿ ಸಾಮಾನ್ಯವಾಗಿ ಮೊದಲು ಮನೆಯಲ್ಲಿಯೇ ಆರಂಭವಾಗುತ್ತದೆ. ಅವರನ್ನು ಅವರ ಸಹೋದರರಿಗೆ ಸಮಾನವೆಂಬಂತೆ ನೋಡಿಕೊಳ್ಳುವುದಿಲ್ಲ. ಗಂಡುಮಕ್ಕಳನ್ನು ನೋಡುವಲ್ಲಿ, ಅವರಿಗೆ ತೋರುವ ಔದಾರ್ಯ ಹೆಣ್ಣುಮಕ್ಕಳಿಗೆ ದೊರಕುವುದಿಲ್ಲ. ಇದು ಅವರಿಗೆ ವಿದ್ಯಾಭ್ಯಾಸವನ್ನು ಕೊಡುವುದರಲ್ಲಿಯೂ ಇರುವುದನ್ನು ನೋಡಬಹುದು. ಈ ಮನೋಭಾವ ನಮ್ಮಲ್ಲಿ ಹಾಸುಹೊಕ್ಕಾಗಿದೆ. ನಮ್ಮ ಸಮಾಜ ಇಂತಹ ಪಕ್ಷಪಾತದ ದೃಷ್ಟಿಯನ್ನು ತೊರೆದು, ಹೆಣ್ಣು ಮಕ್ಕಳಿಗೂ ಗಂಡುಮಕ್ಕಳಿಗೆ ನೀಡುವಷ್ಟೇ ಆದ್ಯತೆ, ಪ್ರೀತಿ, ಪ್ರೋತ್ಸಾಹ, ವ್ಯಕ್ತಿತ್ವವಿಕಾಸದ ಅವಕಾಶಗಳನ್ನು ಕೊಡಬೇಕು. ಈ ವಿಷಯದಲ್ಲಿ ತಾರತಮ್ಯ ಸುತರಾಂ ಸಲ್ಲದು.

ಅಬಲೆಯರು ಎಂದು ನಮ್ಮ ಸಮಾಜವು ಪರಿಗಣಿಸಿರುವ ಹೆಣ್ಣುಮಕ್ಕಳನ್ನು ಸಬಲರನ್ನಾಗಿಸಿ, ಅವರು ತಮ್ಮ ಮುಂದಿನ ಜೀವನದಲ್ಲಿ ಸ್ವಾವಲಂಬಿಗಳಾಗಿ, ಎದುರಾಗಬಹುದಾದ ಸಮಸ್ಯೆಗಳನ್ನು, ಕಷ್ಟ, ಸಂದಿಗ್ಧ ಸಂದರ್ಭಗಳನ್ನು ತಮ್ಮಲ್ಲಿರುವ ಅಂತಃಶಕ್ತಿಯನ್ನು ಬಳಸಿಕೊಂಡು ನಿಭಾಯಿಸಲು ಸಮರ್ಥರಾಗುವಂತೆ ಅವರನ್ನು ಉದ್ದೀಪಿಸುವುದು, ಅದಕ್ಕೆ ಅಗತ್ಯವಾದ ಆತ್ಮಸ್ಥೈರ್ಯವನ್ನು ಅವರಲ್ಲಿ ತುಂಬುವುದು, ನಮ್ಮ ಕರ್ತವ್ಯ.

ಕಾಲವು ಬದಲಾಗುತ್ತಲೇ ಇರುತ್ತದೆ. ಅದಕ್ಕೆ ತಕ್ಕಂತೆ ನಾವು ನಮ್ಮ ಮಕ್ಕಳು, ಅದರಲ್ಲಿಯೂ ಹೆಣ್ಣುಮಕ್ಕಳು ಕೂಡ ಬದಲಾಗಬೇಕು. ಇದು ಡಿಜಿಟಲ್‌ಯುಗ, ತಂತ್ರಜ್ಞಾನದ ಯುಗ. ನಮ್ಮ ಜೀವನದ ಎಲ್ಲ ವಿಷಯಗಳ ಮೇಲೂ ಇವು ತಮ್ಮ ಪ್ರಭಾವವನ್ನು ಬೀರುತ್ತಿವೆ. ನವೀನ ತಂತ್ರಜ್ಞಾನಗಳನ್ನು ಬಳಸಿಕೊಳ್ಳದ ಜೀವನವನ್ನು ನಾವು ಇಂದು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿಯಲ್ಲಿ ನಾವಿದ್ದೇವೆ. ಇದರ ಜೊತೆಗೆ ಪ್ರತಿದಿನವೂ ಹೊಸ ಹೊಸ ತಂತ್ರಜ್ಞಾನಗಳು ಆವಿಷ್ಕರಿಸಲ್ಪಡುತ್ತಿವೆ. ಇವುಗಳ ಸಂಗಡ ನಾವೂ ದಾಪುಗಾಲಿಕ್ಕುತ್ತಾ ಸಾಗಬೇಕಾದುದು ಅನಿವಾರ್ಯ. ಅಂತರ್ಜಾಲವನ್ನು ಬಳಸದೆ ಯಾವಕಾರ್ಯವೂ ನಡೆಯುವುದೇ ದುಸ್ಸಾಧ್ಯ ಎನ್ನುವ ದಿನಗಳು ಇವು. ಅಂತರ್ಜಾಲವು ಇಂದು ಅತ್ಯಂತ ಪ್ರಬಲವಾಗಿ, ಜೀವನದ ಶೈಲಿಯಲ್ಲಿ ಅಭೂತ ಪೂರ್ವಕ್ರಾಂತಿಯನ್ನು ಉಂಟುಮಾಡಿದೆ. ಮನೆಗೆ ಅಗತ್ಯವಾದ ದಿನಸಿಗಳಾಗಿರಲಿ ಅಥವಾ ಇನ್ನಿತರ ಪದಾರ್ಥ/ಸಲಕರಣೆಗಳನ್ನು ಖರೀದಿಸುವುದಿರಲಿ, ಕಚೇರಿ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ಚರ್ಚೆಗಳಾಗಿರಲಿ, ವಿದ್ಯಾಭ್ಯಾಸದ ವಿಧಾನವಾಗಿರಲಿ, ಇತರರೊಂದಿಗೆ ನಡೆಸುವ ಸಂಪರ್ಕವಾಗಿರಲಿ – ಎಲ್ಲಕ್ಕೂ ಇಂದು ಅಂತರ್ಜಾಲವು ಅತ್ಯಗತ್ಯವಾಗಿದೆ. ಇದಲ್ಲದೆ, ಸದಾಕಾಲ ತೆರೆದಿರುವ ತಂತ್ರಜ್ಞಾನದ ಆವಿಷ್ಕಾರದ ಬಾಗಿಲಿನ ಮೂಲಕ, ಇಂದು 'ಕೃತಕ ಬುದ್ಧಮತ್ತೆ' (ಆರ್ಟಿಪಿಷಿಯಲ್‌ಇಂಟೆಲಿಜೆನ್ಸ್) ಮತ್ತು ಚಾಟ್–ಜಿಪಿಟಿ ಎಂಬ ದೈತ್ಯಶಕ್ತಿಗಳು ಪ್ರವೇಶಿಸಿವೆ. ಇವುಗಳ ಶಕ್ತಿ ಅಪಾರ. ಇವು ನಮ್ಮ ದೈನಂದಿನ ಎಲ್ಲಾ ವ್ಯವಹಾರಗಳನ್ನು, ತನ್ಮೂಲಕ ನಮ್ಮ ಜೀವನವನ್ನು ಸುಗಮಗೊಳಿಸುತ್ತಿವೆ. ಮಾನವನ ಶ್ರಮವನ್ನು ಕಡಮೆಮಾಡುತ್ತಿವೆ. ನಮ್ಮ ಹೆಣ್ಣುಮಕ್ಕಳು ಈ ವಿಷಯಗಳಲ್ಲಿ ಜ್ಞಾನವನ್ನು ಸಂಪಾದಿಸಿಕೊಳ್ಳುವಂತೆ, ಅವುಗಳನ್ನು ಬಳಸಿಕೊಂಡು ಗಂಡುಮಕ್ಕಳಿಗೆ ಸರಿಸಮಾನವಾಗಿ ನಿಲ್ಲುವಂತೆ ಮಾಡಬೇಕು. ಆದರೆ, ಈ ಕ್ಷೇತ್ರದಲ್ಲಿ ನಮ್ಮ ಹೆಣ್ಣುಮಕ್ಕಳು ಜಾಗ್ರತೆಯನ್ನೂ ವಹಿಸಬೇಕಾಗಿರುವುದು ಅತ್ಯಗತ್ಯ. ಕಾರಣ, ಅವರನ್ನು ದುಷ್ಪ್ರವೃತ್ತಿಯ ಜನರು ಮರುಳುಮಾಡಿ ಅಥವಾ ಬೆದರಿಸಿ ಅಡ್ಡದಾರಿಗೆ ಎಳೆಯುವ ಪ್ರಯತ್ನಗಳನ್ನು ಮಾಡುವುದು ವಾಸ್ತವ. ಆದುದರಿಂದ ಅಂತರ್ಜಾಲದ ವಿಷಯದಲ್ಲಿ ಹೆಣ್ಣುಮಕ್ಕಳನ್ನು ಮುಂದುವರಿಯಲು ಬಿಡಲು ಪೋಷಕರು ಹಿಂದೇಟು ಹಾಕುವುದು ಕೂಡ ಅಷ್ಟೇ ವಾಸ್ತವ. ತಮ್ಮ ಉಪನ್ಯಾಸದಲ್ಲಿ ಪ್ರೊ. ಸಿಬಂತಿ ಪದ್ಮನಾಭ ಅವರು "ಸೈಬರ್ ಬುಲ್ಲೀಯಿಂಗ್, ಸೈಬರ್ ಸ್ಟಾಕಿಂಗ್" ಮೊದಲಾದ ಸೈಬರ್ ಅಪರಾಧಗಳ ಬಗೆಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳನ್ನು ವಿವರವಾಗಿ ತಿಳಿಸಿಕೊಟ್ಟರು. ನಮ್ಮ ಹೆಣ್ಣುಮಕ್ಕಳು ಎದೆಗುಂದದೆ, ಈ ದುಷ್ಟಶಕ್ತಿಗಳ ವಿರುದ್ಧ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡು ಸದಾ ಜಾಗೃತರಾಗಿ ಈ ಕ್ಷೇತ್ರದಲ್ಲಿಯೂ ಮುಂದುವರಿಯಬೇಕಾದುದು ಅಗತ್ಯ ಮತ್ತು ಅನಿವಾರ್ಯ. ಇದಕ್ಕೆ ಪೂರಕವಾಗಿ, ಸಂಬಂಧಪಟ್ಟವರು – ಅಂದರೆ, ಪೋಷಕರು, ಉಪಾಧ್ಯಾಯರು ಮತ್ತು ಹಿತೈಷಿಗಳು – ಹೆಣ್ಣುಮಕ್ಕಳಿಗೆ ಸೂಕ್ತವಾದ ಜ್ಞಾನವನ್ನು ನೀಡಿ, ಅವರು ಅಂತರ್ಜಾಲದಲ್ಲಿರುವ ಅಪರಾಧೀ ಮನೋಭಾವದ ವ್ಯಕ್ತಿಗಳಿಂದಾಗಿ ಕಷ್ಟನಷ್ಟಗಳಿಗೆ ತುತ್ತಾಗದಂತೆ ನೋಡಿಕೊಳ್ಳಬೇಕು.

ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ–2025ರ ಧ್ಯೇಯವಾಕ್ಯ 'ಹೆಣ್ಣುಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಅವರನ್ನು ಸಬಲಗೊಳಿಸಿ' ಎಂದಾಗಿರುವುದರಿಂದ, ಪ್ರೊ.ಸಿಬಂತಿ ಪದ್ಮನಾಭ ಅವರು ಡಿಜಿಟಲ್‌ಲೋಕದಲ್ಲಿ ಹೆಣ್ಣುಮಕ್ಕಳನ್ನು ಸಬಲರನ್ನಾಗಿಸುವುದನ್ನು ಕುರಿತು ನೀಡಿದ ಉಪನ್ಯಾಸವು ಅತ್ಯಂತ ಸಮಯೋಚಿತವೂ, ಉದ್ಬೋಧಕವೂ, ಉಪಯುಕ್ತವೂ ಆಗಿತ್ತು ಎಂಬುದು ನನ್ನಅಭಿಪ್ರಾಯ.

**ಕನ್ನಡಕ್ಕೆ: ವಿ.ಕೃಷ್ಣ**

# ಸೈಬರ್ ಆಕ್ರಮಣ: ಒಂದು ಪಕ್ಷಿನೋಟ

▪ ಪ್ರೊ. ಸಂಹಿತಾ ಶಾಂತಮೂರ್ತಿ



ಪ್ರಾಧ್ಯಾಪಕರು ಶ್ರೀದೇವಿ
ಇಂಜಿನಿಯರಿಂಗ್ ಕಾಲೇಜು
ಆರ್ಟಿಫಿಯಲ್
ಇಂಟಲಿಜೆಟ್ ವಿಭಾಗ

ಇತ್ತೀಚಿನ ದಿನಗಳಲ್ಲಿ 'ಕೃತಕ ಬುದ್ಧಿಮತ್ತೆಯು' (Artificial Intelligence - AI) ಅದ್ಭುತವಾದ ಪ್ರಗತಿಯನ್ನು ಕಂಡು, ನಮ್ಮ ಜೀವನದ ಹೆಚ್ಚುಕಡಮೆ ಎಲ್ಲಾ ಕ್ಷೇತ್ರಗಳನ್ನೂ ಬಹಳವಾಗಿ ಪ್ರಭಾವಿಸುತ್ತಿದೆ. ಹಾಗೆಯೇ, ಅದು ಸೈಬರ್ ರಕ್ಷಣೆಯ ವಿಷಯದಲ್ಲಿಯೂ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಸೈಬರ್ ರಕ್ಷಣೆಯ ಕ್ಷೇತ್ರದಲ್ಲಿ ಅನೇಕ ಕಂಪನಿಗಳಿಗೆ ಸಹಾಯವನ್ನು ಮಾಡುವ ಫೋರ್ಟಾ ಕಂಪನಿಯ ಸಲ್ಯೂಷನ್ಸ್ ಇಂಜನಿಯರಿಂಗ್ ವಿಭಾಗದ ಅಸೋಸಿಯೇಟ್ ನಿರ್ದೇಶಕರಾಗಿರುವ ಕ್ರಿಸ್ ಸ್ವಾಜೆನ್ ಅವರು ಹೇಳುವಂತೆ "ಎಐ ಮಾನವಶ್ರಮವನ್ನು ಕಡಮೆ ಮಾಡಿ ನಮ್ಮ ಕಾರ್ಯಗಳಲ್ಲಿ ವೃತ್ತಿ ನೈಪುಣ್ಯವನ್ನು ಹೆಚ್ಚುಮಾಡಿ, ನಮ್ಮ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರೈಸಲು ಸಹಾಯಮಾಡಿದರೂ, ಅದು ಎರಡು ಬಾಯಿಯ ಖಡ್ಗದಂತಿದೆ. ಸೈಬರ್ ದುಷ್ಕರ್ಮಿಗಳೂ ಇದನ್ನು ಬಳಸಿಕೊಂಡು ಹೆಚ್ಚು ಹೆಚ್ಚು ಸಂಕೀರ್ಣವಾದ ಅಡಚಣೆಗಳನ್ನು ನಮಗೆ ಒಡ್ಡುತ್ತಾರೆ." ಸೈಬರ್ ಅಪರಾಧಗಳಲ್ಲಿ ನಮ್ಮ ಗಮನಕ್ಕೆ ಬರುವಂತಹವು ಕೇವಲ ಶೇ. 2ರಷ್ಟು ಮಾತ್ರ. ನಾವು ದಿನನಿತ್ಯ ಬಳಸುವ ಕಂಪ್ಯೂಟರ್‌ಗಳು, ಅವುಗಳ ಸಂಪರ್ಕವ್ಯವಸ್ಥೆಗಳು ಇವುಗಳಲ್ಲಿ ಸೇರುತ್ತವೆ. ಉಳಿದ ಸೈಬರ್ ಅಪರಾಧಗಳನ್ನು 1) ಅನಿರ್ದಿಷ್ಟ ವ್ಯಕ್ತಿಗಳನ್ನು ಗುರಿಯನ್ನಾಗಿಸಿಕೊಂಡಿರುವಂತಹವು ಮತ್ತು 2) ಉದ್ದೇಶಪೂರಿತವಾಗಿ ಕೆಲವು ಸಂಸ್ಥೆ/ವ್ಯಕ್ತಿಗಳನ್ನು ಗುರಿಯನ್ನಾಗಿಸಿಕೊಂಡಿರುವಂತಹವು ಎಂದು ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು.

### ಅನಿರ್ದಿಷ್ಟ ವ್ಯಕ್ತಿಗಳನ್ನು ಗುರಿಯನ್ನಾಗಿಸಿಕೊಂಡಿರುವಂತಹವು:

ಇವು ಹಲವಾರು ಜನರಿಗೆ ತೊಂದರೆಯನ್ನುಂಟು ಮಾಡುತ್ತವೆಯಾದರೂ ಈ ದುಷ್ಕರ್ಮಿಗಳಿಗೆ ನಿರ್ದಿಷ್ಟ ವ್ಯಕ್ತಿಗಳಿಗೆ ಇದು ಹಾನಿಯನ್ನುಂಟು ಮಾಡಬೇಕೆಂಬ ಉದ್ದೇಶವಿರುವುದಿಲ್ಲ. ಇವುಗಳಲ್ಲಿ ಡಿಜಿಟಲ್ ಸಾಧನಗಳನ್ನು ಬಳಸಿ ಬಂಧನದ ಭೀತಿಯನ್ನು ಸಾಮಾನ್ಯರಿಗೆ ಒಡ್ಡುವುದು, ಮಾರಾಟಗಾರರಿಂದ ಅಥವಾ ದುಷ್ಟವ್ಯಕ್ತಿಗಳಿಂದ ಬರುವ ಸ್ಪ್ಯಾಮ್‌ಕರೆಗಳು ಮತ್ತು ಸಂದೇಶಗಳು, ಕಂಪ್ಯೂಟರ್ ಅಪ್ಲಿಕೇಷನ್ ವಂಚನೆಗಳು, ಆಧಾರ್ ಬಳಸಿ ಮಾಡುವ ಹಣಕಾಸಿನ ಅಪರಾಧಗಳು, ಸ್ಕಿಮ್ಮಿಂಗ್ (ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್‌ಗಳನ್ನು ಕಾಪಿಮಾಡಿಕೊಂಡು ಮಾಡುವ ಅಪರಾಧಗಳು), ಮುಂತಾದವು ಒಳಗೊಂಡಿರುತ್ತವೆ.

ಡಿಜಿಟಲ್ ಸಾಧನಗಳನ್ನು ಬಳಸಿ ಬಂಧನದ ಭೀತಿಯನ್ನು ಸಾಮಾನ್ಯರಿಗೆ ಒಡ್ಡುವ ಅಪರಾಧಗಳೆಂದರೆ, ಸೈಬರ್ ದುಷ್ಕರ್ಮಿಗಳು ದೂರವಾಣಿ ಮೂಲಕ ಅಥವಾ ಮೇಲ್ ಮೂಲಕ ವ್ಯಕ್ತಿಗಳಿಗೆ ಕರೆಮಾಡಿ ಅಪರಾಧ ಪತ್ತೆ ವಿಭಾಗದ ಅಧಿಕಾರಿಗಳಂತೆ ನಟಿಸುತ್ತಾ ಆ ವ್ಯಕ್ತಿಗಳು ಕೆಲವು ಗಂಭೀರ ಅಪರಾಧಕ್ಕೆ ಸಂಬಂಧಿಸಿದ ತನಿಖೆಯ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆಂದು ಹೇಳಿ ಅವರನ್ನು ಬಂಧಿಸುವ ಬೆದರಿಕೆಯನ್ನು ಒಡ್ಡಿ ಅವರಿಂದ ಹಣವನ್ನು ವಸೂಲಿ ಮಾಡುವುದು.

ಕಂಪ್ಯೂಟರ್ ಅಪ್ಲಿಕೇಷನ್ ವಂಚನೆಗಳೆಂದರೆ, ದುಷ್ಕರ್ಮಿಗಳು ವ್ಯಕ್ತಿಗಳ ಕಂಪ್ಯೂಟರ್ ಅಥವಾ ಮೊಬೈಲ್ ಫೋನ್‌ಗಳ ಮೇಲೆ ದಾಳಿಮಾಡಿ, ಅವರ ಹಣವನ್ನು ದುಷ್ಟವಿಧಾನಗಳಿಂದ ಅಪಹರಿಸುವುದು. ಹೀಗೆ ಮಾಡುವಾಗ ದುಷ್ಕರ್ಮಿಗಳು, ಸಾಲಕ್ಕೆ ಅರ್ಜಿಯನ್ನು ಸಲ್ಲಿಸುವಂತೆಯೂ ಸುಲಭವಾಗಿ ಅಂತಹ ಸೌಲಭ್ಯವನ್ನು ದೊರಕಿಸಿಕೊಡುವುದಾಗಿಯೂ ಪುಸಲಾಯಿಸಿ ಆ ವ್ಯಕ್ತಿಗಳನ್ನು ತಮ್ಮ ಬಲೆಗೆ ಬೀಳಿಸಿಕೊಳ್ಳುತ್ತಾರೆ. ಇದಕ್ಕಾಗಿ ಅವರು ಬೇರೆ ಬೇರೆ ಹಣಕಾಸು ಸಂಸ್ಥೆಗಳ ಲಾಂಛನವನ್ನು ಹಾಗೆಯೇ ಅಥವಾ ಅರಿವಿಗೆ ಬಾರದಂತಹ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಬಳಸುತ್ತಾರೆ. ಇಂತಹ ಲಾಂಛನಗಳಿರುವ ಹಾಗೂ ಸಾಮಾನ್ಯ ಜನರನ್ನು ಮರುಳುಮಾಡುವಂತಹ ಅನೇಕ ಕಂಪ್ಯೂಟರ್ ಅಪ್ಲಿಕೇಷನ್‌ಗಳು 'ಪ್ಲೇ–ಸ್ಟೋರ್'ನಲ್ಲಿ ಅಧಿಕ ಸಂಖ್ಯೆಯಲ್ಲಿರುವುದನ್ನು ನೋಡಬಹುದು. ಇವುಗಳನ್ನು ನೋಡಿ ಸಾಮಾನ್ಯ ಜನರು ಮೋಸಹೋಗಬಾರದು.

UIDAI ಮತ್ತು ಬ್ಯಾಂಕ್‌ಗಳು ಇತ್ತೀಚೆಗೆ ತೆಗೆದುಕೊಂಡಿರುವ ಕಠಿಣ ಕ್ರಮಗಳಿಂದಾಗಿ, ಉದಾಹರಣೆಗೆ ಬೆರಳಿನ ಗುರುತು ಅಥವಾ ಮುಖವನ್ನು ಗುರುತಿಸುವ ತಂತ್ರಜ್ಞಾನ ಮೊದಲಾದವನ್ನು ಅಳವಡಿಸಿಕೊಂಡಿರುವ ಕಾರಣದಿಂದಾಗಿ, ಆಧಾರ್ ಕಾರ್ಡ್‌ಗಳನ್ನು ದುರ್ಬಳಕೆ ಮಾಡಿಕೊಂಡು ಎಸಗುವ ಹಣಕಾಸಿನ ಅಪರಾಧಗಳು ಬಹಳಷ್ಟು ಕಡಮೆಯಾಗಿವೆ. ಆದರೂ, ದುಷ್ಕರ್ಮಿಗಳು, ಇಂತಹ ಗುರುತುಗಳನ್ನು ಕೂಡ ನಕಲಿ ಮಾಡಿ ಸಾಮಾನ್ಯರ ಹಣವನ್ನು ಬ್ಯಾಂಕ್‌ಗಳಿಂದ ಅಪಹರಿಸುತ್ತಾರೆ.

ಸ್ಕಿಮ್ಮಿಂಗ್‌ನಲ್ಲಿ ಕ್ರೆಡಿಟ್ ಅಥವಾ ಡೆಬಿಟ್‌ಕಾರ್ಡ್‌ಗಳನ್ನು ಕಾಪಿಮಾಡಿಕೊಂಡು ನಕಲಿ ಕಾರ್ಡ್‌ಗಳನ್ನು ಸೃಷ್ಟಿ ಮಾಡಿಕೊಂಡು ಎಸಗುವ ಅಪರಾಧಗಳು ಬರುತ್ತವೆ. ಈ ವಿಧದ ಅಪರಾಧಗಳು ಎ.ಟಿ.ಎಂಗಳು, ಪೆಟ್ರೋಲ್ ಬಂಕ್‌ಗಳು ಮೊದಲಾದ ಎಡೆಗಳಲ್ಲಿ ನಡೆಯುತ್ತವೆ. ನಕಲಿ ಕಾರ್ಡ್‌ಗಳನ್ನು ಬಳಸಿ ಅಂತರ್ಜಾಲದಲ್ಲಿ ನಡೆಯುವ ವ್ಯವಹಾರಗಳಲ್ಲಿ (ಇ–ಕಾಮರ್ಸ್) ಇತರರಿಗೆ ಸೇರಿದ ಯಾ ಸೇರಬೇಕಾದ ಹಣವನ್ನು ಲಪಟಾಯಿಸಲಾಗುತ್ತದೆ. ಬಳಕೆದಾರರು ಸುರಕ್ಷಿತವಲ್ಲದ ಅಂತರ್ಜಾಲ ಸಂಪರ್ಕಗಳ (ವೈ–ಫೈಗಳ) ಮೂಲಕ ನಡೆಸುವ ವ್ಯವಹಾರಗಳಿಗೂ ಈ ದುಷ್ಕರ್ಮಿಗಳು ಕನ್ನವನ್ನು ಹಾಕಿ ಮಾಹಿತಿಗಳನ್ನು ಸ್ವಲಾಭಕ್ಕಾಗಿ ಕದಿಯುತ್ತಾರೆ. ಈ ವಿಧಾನಕ್ಕೆ ವೈ–ಫೈ ಸ್ಕಿಮ್ಮಿಂಗ್ ಎಂದು ಕರೆಯುತ್ತಾರೆ.

### ನಿರ್ದಿಷ್ಟ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಗುರಿಯಾಗಿಸಿಕೊಳ್ಳುವುದು:

ಇವುಗಳು ನಿರ್ದಿಷ್ಟ ವ್ಯಕ್ತಿಗಳ ಅಥವಾ ಸಂಸ್ಥೆಗಳ ಡಿಜಿಟಲ್ ವ್ಯವಸ್ಥೆಗಳ ಮೇಲೆ ದಾಳಿಮಾಡಿ ಅಲ್ಲಿನ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ಮಾಡುವ ಅಪರಾಧಗಳು. ಇವಕ್ಕೆ ಸಾಮಾನ್ಯವಾಗಿ ಕಂಪೊಟೇಟರ್ ಅಪರಾಧಗಳು ಎನ್ನುತ್ತಾರೆ. ಇಂತಹ ದುಷ್ಕರ್ಮಿಗಳು ಈ ವಿಷಯದಲ್ಲಿ ಬಹಳ ಸೂಕ್ಷ್ಮವಾಗಿ ಯೋಜಿಸಿ ತಮ್ಮ ಕಾರ್ಯವನ್ನು ನಡೆಸುತ್ತಾರೆ. ಇವುಗಳನ್ನು ನಡೆಸಲು ಅಗತ್ಯವಾದ ಮಾಹಿತಿಗಳನ್ನು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಪ್ರಮುಖ ಹುದ್ದೆಗಳಲ್ಲಿರುವ ವ್ಯಕ್ತಿ ಅಥವಾ ತನ್ನ ಕಂಪನಿಯ ವಿಷಯದಲ್ಲಿ ಅಸಂತುಷ್ಟರಾಗಿರುವ ಅಲ್ಲಿನ ಇತರ ಉದ್ಯೋಗಿಯೊಬ್ಬರೊಡನೆ ಗೆಳೆತನವನ್ನು ಬೆಳಸಿ, ಅವರಿಗೆ ಮದ್ಯಪಾನ ಮಾಡಿಸಿ ಅವರಿಂದ ಮಾಹಿತಿಗಳನ್ನು ಪಡೆಯುತ್ತಾರೆ. ಇಂತಹ ಕೃತ್ಯಗಳಿಂದ ಇತರ ದೇಶಗಳನ್ನು, ಅಲ್ಲಿನ ಬ್ಯಾಂಕ್‌ಗಳನ್ನು, ಪ್ರಮುಖ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳನ್ನು ಲೂಟಿಮಾಡುತ್ತಾರೆ ಅಥವಾ ಅವುಗಳಿಗೆ ಸಂಬಂಧಿಸಿದ ಸೂಕ್ಷ್ಮಮಾಹಿತಿಗಳನ್ನು ತಮ್ಮ ಅಥವಾ ತಮ್ಮ ದೇಶದ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಇದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಪ್ರತಿಷ್ಠೆಗೂ ಹಾನಿಯಾಗಬಹುದು. ಇತ್ತೀಚೆಗೆ ಪ್ರಕಟವಾದ ವರದಿಯೊಂದರ ಪ್ರಕಾರ ಶೇ. 30ರಷ್ಟು ಇಂತಹ ಪ್ರಕರಣಗಳಲ್ಲಿ, ಅತೃಪ್ತ ಉದ್ಯೋಗಿಗಳೇ ದುರುದ್ದೇಶದಿಂದ ತಮ್ಮ ಸಂಸ್ಥೆಯ ಒಳಗಿನ ಸೂಕ್ಷ್ಮ ಮಾಹಿತಿಗಳನ್ನು ಹೊರಗಿನವರಿಗೆ ನೀಡುತ್ತಾರೆ. ಉದಾಹರಣೆಗೆ, ಸ್ಯಾನ್ ಫ್ರಾನ್ಸಿಸ್ಕೋ ನಗರದಲ್ಲಿನ ಸಂಪರ್ಕವ್ಯವಸ್ಥೆಯ ಆಡಳಿತಾಧಿಕಾರಿಯೊಬ್ಬರು ತಮ್ಮನ್ನು ಸಂಸ್ಥೆಯಿಂದ ಹೊರದೂಡಿದ ಬಳಿಕ ತಮ್ಮ ಹಿಂದಿನ ಮೇಲಧಿಕಾರಿಯ ಮೇಲಿನ ಸೇಡನ್ನು ತೀರಿಸಿಕೊಳ್ಳಲೋಸುಗ, ತಾವು ಈ ಮೊದಲು ನೋಡಿಕೊಳ್ಳುತ್ತಿದ್ದ ಕಂಪ್ಯೂಟರ್‌ನ ಸಂಪರ್ಕ ವ್ಯವಸ್ಥೆಯ ಪಾಸ್‌ವರ್ಡ್‌ನ್ನು ಸಂಸ್ಥೆಯಲ್ಲಿ ಸಂಬಂಧಪಟ್ಟವರಿಗೆ ತಿಳಿಸಲು ನಿರಾಕರಿಸಿದ್ದರು. ಉತ್ತರ ಕರೋಲಿನಾದ ಲಾನ್ಸ್‌ಸಂಸ್ಥೆಯಲ್ಲಿ ನಡೆದ ಇಂತಹುದೇ ಇನ್ನೊಂದು ಪ್ರಕರಣವನ್ನು ನೋಡಬಹುದು. ತನಗೆ ಹಿಂಬಡ್ತಿಯನ್ನು ಕೊಟ್ಟ ಕಾರಣದಿಂದ ಸಿಟ್ಟಾದ ಕಂಪ್ಯೂಟರ್ ಪ್ರೋಗ್ರಾಮರ್ ಒಬ್ಬರು ಸಂಸ್ಥೆಯ ಕಂಪ್ಯೂಟರ್ ಸಂಪರ್ಕವ್ಯವಸ್ಥೆಯಲ್ಲಿ ತಾನು ದುರುದ್ದೇಶದಿಂದ ರೂಪಿಸಿದ್ದ ತಂತ್ರಾಂಶದ ಕ್ರಮವಿಧಿಯೊಂದನ್ನು ಹರಿಯ ಬಿಟ್ಟು ಹಲವು ದಿನಗಳ ಕಾಲ ಎಲ್ಲ ಕಂಪ್ಯೂಟರ್ ಕಾರ್ಯಗಳನ್ನು ಅಸ್ತವ್ಯಸ್ತಗೊಳ್ಳುವಂತೆ ಮಾಡಿದ್ದ.



"ಎಐ ಮಾನವಶ್ರಮವನ್ನು ಕಡಮೆ ಮಾಡಿ ನಮ್ಮ ಕಾರ್ಯಗಳಲ್ಲಿ ವೃತ್ತಿ ನೈಪುಣ್ಯವನ್ನು ಹೆಚ್ಚುಮಾಡಿ, ನಮ್ಮ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರೈಸಲು ಸಹಾಯಮಾಡಿದರೂ, ಅದು ಎರಡು ಬಾಯಿಯ ಖಡ್ಗದಂತಿದೆ. ಸೈಬರ್ ದುಷ್ಕರ್ಮಿಗಳೂ ಇದನ್ನು ಬಳಸಿಕೊಂಡು ಹೆಚ್ಚು ಹೆಚ್ಚು ಸಂಕೀರ್ಣವಾದ ಅಡಚಣೆಗಳನ್ನು ನಮಗೆ ಒಡ್ಡುತ್ತಾರೆ."

ವಿದೇಶೀ ನೆಲದಿಂದ ಮಾಡುವ ಸೈಬರ್‌ದಾಳಿಗಳನ್ನು ಹೊರದೇಶಗಳಿಂದ ಪ್ರೇರಿತವಾದ ಅಪರಾಧಗಳೆಂದು ಪರಿಗಣಿಸುತ್ತಾರೆ. ಈ ವಿಧದ ಅಪರಾಧಗಳಲ್ಲಿ ಬೇಹುಗಾರಿಕೆ, ವಿಧ್ವಂಸಕ ಕೃತ್ಯ, ಪವರ್ ಗ್ರಿಡ್‌ಗಳ ಮೇಲಿನ ದಾಳಿ, ವ್ಯವಸ್ಥಿತ ಅಪಪ್ರಚಾರ, ಆರ್ಥಿಕ ಚಟುವಟಿಕೆಗಳನ್ನು ಅಸ್ತವ್ಯಸ್ತಗೊಳಿಸುವುದು, ಮೊದಲಾದವು ಸೇರುತ್ತವೆ. ವಿಧ್ವಂಸಕ ಕೃತ್ಯಗಳೆಂದರೆ, ಕಂಪ್ಯೂಟರ್ ವ್ಯವಸ್ಥೆ ಮತ್ತು ದತ್ತಾಂಶಗಳನ್ನು ದಾಳಿಗೊಳಪಡಿಸಿ ಹಾಳುಮಾಡುವುದು. ಉದಾಹರಣೆಗೆ, 2022ರ ಜುಲೈನಲ್ಲಿ ಗೋವಾದ ರಾಜ್ಯದಲ್ಲಿ ಪ್ರವಾಹ ನಿಯಂತ್ರಣದ ಜವಾಬ್ದಾರಿಯನ್ನು ಹೊಂದಿರುವ ಅಲ್ಲಿನ ಜಲಸಂಪನ್ಮೂಲ ಇಲಾಖೆಯ ಮೇಲೆ ಇಂತಹ ಒಂದು ದಾಳಿ ನಡೆಯಿತು. ಎಲೆಕ್ಟ್ರಿಕ್ ಗ್ರಿಡ್‌ಗಳ ಮೇಲಿನ ದಾಳಿಯ ಹಿಂದಿರುವ ಉದ್ದೇಶವು ದೇಶದಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳನ್ನು ನಾಶಮಾಡಿ, ಆರ್ಥಿಕ ಕ್ಷೇತ್ರವನ್ನು ಅಲ್ಲೋಲಕಲ್ಲೋಲಗೊಳಿಸುವುದು. ಈ ಮೂಲಕ, ಪ್ರತಿದಿನ 1000 ಮೆಗಾವ್ಯಾಟ್ ವಿದ್ಯುತ್ ಸರಬರಾಜನ್ನು ಒದಗಿಸುವ ಮಹಾರಾಷ್ಟ್ರ ವಿದ್ಯುತ್ ಸರಬರಾಜು ಕಂಪನಿಯ ಮೇಲೆ ಚೈನಾದ ದುಷ್ಕರ್ಮಿಗಳು 2020ರ ಅಕ್ಟೋಬರ್ 20ರಂದು ದಾಳಿನಡೆಸಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯನ್ನು ಹದಗೆಡಿಸಿದ್ದರು. ಇದರ ಜೊತೆಗೆ, ಅದಾನಿ ಮತ್ತು ಟಾಟಾ ಸಮೂಹಗಳಿಗೆ ಸಂಬಂಧಿಸಿದ ವಿದ್ಯುತ್ ಸರಬರಾಜು ವ್ಯವಸ್ಥೆಗಳನ್ನು ಕೂಡ ಈ ದಾಳಿ ಹಾಳುಮಾಡಿತ್ತು.

ಅಪಪ್ರಚಾರದ ಕೃತ್ಯಗಳು ಒಂದು ದೇಶದ ಆಡಳಿತ, ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಗಳಲ್ಲಿ ಬಿರುಕನ್ನುಂಟುಮಾಡಿ, ನಿರ್ದಿಷ್ಟ ಜನಾಭಿಪ್ರಾಯವನ್ನು ಹುಟ್ಟುಹಾಕಿ, ಅಲ್ಲಿನ ವ್ಯವಸ್ಥೆಗಳ ವಿರುದ್ಧ ಸ್ಥಳೀಯ ಜನರೇ ಸಿಡಿದೇಳುವಂತಹ ಪರಿಸ್ಥಿತಿಯನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿರುತ್ತವೆ. ಇವು ದೇಶ–ದೇಶಗಳ ನಡುವೆ ತಿಕ್ಕಾಟಕ್ಕೆ ಕಾರಣವೂ ಆಗಬಹುದು, ವ್ಯಾಪಾರ ವ್ಯವಹಾರಗಳ ಮೇಲೂ ದುಷ್ಪರಿಣಾಮವನ್ನು ಬೀರಬಹುದು. ದುಷ್ಕರ್ಮಿಗಳು ಈ ವಿಧಾನದಲ್ಲಿ ಮುಖ್ಯ ಸುದ್ದಿಯ ಮಾಧ್ಯಮಗಳನ್ನು ಹಾಗೂ ಸಾಮಾಜಿಕ ಮಾಧ್ಯಮಗಳನ್ನು ಹಾಗೂ ಪ್ರಮುಖ ಸ್ಥಾನದಲ್ಲಿರುವ ವ್ಯಕ್ತಿಗಳನ್ನು ಬಳಸಿಕೊಂಡು ಸುಳ್ಳು ಸುದ್ದಿ ಹಬ್ಬಿಸಿ ಅಪಪ್ರಚಾರವನ್ನು ಮಾಡುತ್ತಾರೆ. ಇಂತಹ ದುಷ್ಕೃತ್ಯಗಳು ಸಾಮಾನ್ಯವಾಗಿ ಚುನಾವಣೆಗಳ ಸಮಯದಲ್ಲಿ ಅಥವಾ ದೇಶದಲ್ಲಿ ಮಹತ್ತ್ವದ ಕ್ರಮಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ನಡೆಯುತ್ತವೆ.


ಆರ್ಥಿಕ ದುಷ್ಕೃತ್ಯಗಳಲ್ಲಿ ಒಂದು ಸಂಸ್ಥೆಯ ಸೂಕ್ಷ್ಮ ರಹಸ್ಯಗಳನ್ನು ಕಳ್ಳತನದ ಮೂಲಕ ಪಡೆದುಕೊಂಡು ದಾಳಿಗಳು ಸೇರಿರುತ್ತವೆ. 2018ರ ಆಗಸ್ಟ್‌ನಲ್ಲಿ ಪುಣೆಯ ಕಾಸ್ಮಾಸ್ ಸಹಕಾರಿ ಬ್ಯಾಂಕಿನ ಮೇಲೆ ಸೈಬರ್ ದಾಳಿ ನಡೆದು ಆ ಬ್ಯಾಂಕಿನ ಎಟಿಎಂನಿಂದ ಹಣವನ್ನು ಅಪಹರಿಸಲಾಗಿತ್ತು ಮತ್ತು ಗ್ರಾಹಕರ ವೀಸಾ ಮತ್ತು ರೂಪೆ ಡೆಬಿಟ್‌ಕಾರ್ಡ್‌ಗಳನ್ನು ನಕಲಿಮಾಡಿ, ಅವರ ವೈಯಕ್ತಿಕ ಖಾತೆಗಳಿಂದಲೂ ಹಣವನ್ನು ಲಪಟಾಯಿಸಲಾಗಿತ್ತು. ಬ್ಯಾಂಕಿಗೆ ಸಂಬಂಧಿಸಿದ ಇಂತಹ ಕೃತ್ಯಗಳು ಆಗಸ್ಟ್ 13ರಂದು ದೇಶದ ಹೊರಗೆ 12,000 ಪ್ರಕರಣಗಳು ಹಾಗೂ ಭಾರದಲ್ಲಿ 2,841 ಪ್ರಕರಣಗಳು ನಡೆದಿರುವುದು ಬೆಳಕಿಗೆ ಬಂದವು. ಕೆಲವು ಪ್ರಕರಣಗಳಲ್ಲಿ ಹಣವನ್ನು ಭಾರತದಿಂದ ಹಾಂಕ್‌ಕಾಂಗಿನಲ್ಲಿರುವ ಬ್ಯಾಂಕುಗಳಿಗೆ ವರ್ಗಾಯಿಸಲಾಗಿತ್ತು. ಈ ಪ್ರಕರಣಗಳಲ್ಲಿ ಬ್ಯಾಂಕು ಕಳೆದುಕೊಂಡ ಒಟ್ಟು ಹಣ 94 ಕೋಟಿ ರುಪಾಯಿಗಳು (ಅಂದರೆ, ಸುಮಾರು 13 ದಶಲಕ್ಷ ಡಾಲರ್‌ಗಳು).

ಬೇಹುಗಾರಿಕೆಯ ಮೂಲಕ ಒಂದು ದೇಶದ ರಕ್ಷಣಾ ಸಂಸ್ಥೆಗಳು, ವಿಜ್ಞಾನಸಂಸ್ಥೆಗಳು ಮೊದಲಾದವುಗಳಿಂದ ಆ ದೇಶಕ್ಕೆ ಅಥವಾ ಇತರ ಸಂಸ್ಥೆಗಳಿಗೆ ಸೇರಿದ್ದ ಅತ್ಯಂತ ರಹಸ್ಯ ವಿಚಾರಗಳನ್ನು ಕದಿಯುವುದು. ಇಂತಹ ಕೃತ್ಯಗಳಿಗೂ, ಸಮಾಜದಲ್ಲಿರುವ ಕೆಲವು ಪ್ರಮುಖ ವ್ಯಕ್ತಿಗಳ ಜೊತೆಗೆ ಡಿಜಿಟಲ್ ಮಾಧ್ಯಮಗಳನ್ನು ಕೂಡ ಬಳಸಿಕೊಳ್ಳಲಾಗುತ್ತದೆ.

ಕೃತಕ ಬುದ್ಧಿಮತ್ತೆಯ ಬಳಕೆಯಲ್ಲಿ ಪ್ರಗತಿಯಾದಂತೆ, ದುಷ್ಕರ್ಮಿಗಳೂ ಇದರ ಉಪಯೋಗವನ್ನು ಮಾಡಿಕೊಂಡು ಸಂಕೀರ್ಣವಾದ ರೀತಿಯಲ್ಲಿ, ತಮ್ಮ ಜಾಡುಗಳನ್ನು ಪತ್ತೆ ಹಚ್ಚುವುದು ಸಾಧ್ಯವಿಲ್ಲದಂತೆ ಡಿಜಿಟಲ್ ದಾಳಿಯನ್ನು ಮಾಡುತ್ತಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂತಹವರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವುದು ವೈಜ್ಞಾನಿಕ ವಿಧಾನಗಳ ಮೂಲಕ ಹಾಗೂ ಕಾನೂನಿನ ಪ್ರಕಾರ ಬಹಳ ಕಷ್ಟ. ಇಲ್ಲಿ ಎದುರಾಗುವ ಮತ್ತೊಂದು ತೊಡಕೆಂದರೆ, ಬೇರೆ ಬೇರೆ ದೇಶಗಳಲ್ಲಿ ಡಿಜಿಟಲ್ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಕಾನೂನುಗಳಲ್ಲಿ ಇರುವ ಭಿನ್ನತೆ ಮತ್ತು ಸಂಬಂಧಪಟ್ಟ ದೇಶಗಳ ನಡುವೆ ಸೂಕ್ತವಾದ ಒಪ್ಪಂದಗಳ ಅಭಾವ.

ಇಷ್ಟೆಲ್ಲಾ ಹಾನಿಗಳಾಗುವ ಸಂಭವ ಮತ್ತು ಅವುಗಳನ್ನು ತಡೆಯಲು ಇರುವ ತೊಡಕುಗಳ ನಡುವೆಯೂ ವೈಯಕ್ತಿಕ, ಸಾಂಸ್ಥಿಕ ಹಾಗೂ ದೇಶದ ಮಟ್ಟದಲ್ಲಿ ನಮ್ಮ ರಕ್ಷಣೆಗೆ ಬರುವಂತಹುದು ಎಂದರೆ, ನಮ್ಮ ಎಚ್ಚರಿಕೆ, ಸದಾಕಾಲ ಇಂತಹ ದುಷ್ಕೃತ್ಯಗಳ ವಿರುದ್ಧ ಇರಬೇಕಾದ ಜಾಗ್ರತೆ, ಅದಕ್ಕೆ ಅಗತ್ಯವಾದ ರಕ್ಷಣಾವ್ಯವಸ್ಥೆಯ ವಿಷಯದಲ್ಲಿ ಆಧುನಿಕ ವಿಧಾನಗಳನ್ನು ಬಳಕೆ ಮತ್ತು ನಮ್ಮ ಕಂಪ್ಯೂಟರ್ ಮತ್ತಿತರ ಡಿಜಿಟಲ್ ಸಲಕರಣೆಗಳಲ್ಲಿ ಅಧಿಕೃತ ತಂತ್ರಾಂಶಗಳನ್ನು ಮಾತ್ರ ಬಳಸುವುದು.

## ನೆನಪಿನಲ್ಲಿಡಬೇಕಾದ ಮಾತು



"ದೇವರ ಅನುಗ್ರಹ ಮತ್ತು ಸಾಕ್ಷಾತ್ಕಾರ ಯಾವ ಜಾತಿ ಮತ್ತು ರಾಷ್ಟ್ರದ ಗುತ್ತಿಗೆಯಲ್ಲ. ದೇವರಲ್ಲಿ ಶ್ರದ್ಧೆಯಿಟ್ಟು ಅವನ ಬಾಗಿಲು ಕಾಯುವವರೆಲ್ಲರಿಗೂ ಸಮಾನವಾಗಿ ಅದು ಲಭಿಸುತ್ತದೆ. ದೇವರ ಎಂದರೆ ಪ್ರಕಾಶ, ಅಂಧಕಾರವಲ್ಲ. ದೇವರು ಪ್ರೇಮ, ದ್ವೇಷವಲ್ಲ. ದೇವರು ಎಂದರೆ ಸತ್ಯ, ಅಸತ್ಯವಲ್ಲ. ದೇವರು ಒಬ್ಬನೇ ಶ್ರೇಷ್ಠ. ಅವನು ಸೃಷ್ಟಿಸಿದ ನಾವು ಬರೀ ಮಣ್ಣು."

– **ಮಹಾತ್ಮ ಗಾಂಧೀಜಿ** (ಡಿಸೆಂಬರ್ 26 ಮತ್ತು 27, 1924ರಂದು ಬೆಳಗಾವಿಯಲ್ಲಿ ಜರುಗಿದ 39ನೆಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದಿಂದ ಆಯ್ದ ಭಾಗ)

# ಬಾಲಕಿ ಹೃದಯದ ರಂಧ್ರ ಮುಚ್ಚುವಲ್ಲಿ ಇತಿಹಾಸ ಬರೆದ ಶ್ರೀದೇವಿ ಕಾಲೇಜಿನ ವೈದ್ಯರ ತಂಡ

ಯಾದಗಿರಿ ಸಮಿಪದ ಹಳ್ಳಿಯ ಹತ್ತುವರ್ಷದ (ಮೂರನೆ ತರಗತಿ) ಬಾಲಕಿ ಹೃದಯದಲ್ಲಿದ್ದ ರಂಧ್ರವನ್ನು ಮಿನಿಮಲಿ ಇನ್ವೇಸಿವ್ ಪ್ರೊಸೀಜರ್ (ಕನಿಷ್ಠ ಛೇದನ ವಿಧಾನ) ಮೂಲಕ ಮುಚ್ಚುವ ಶಸ್ತ್ರಚಿಕಿತ್ಸೆಯನ್ನು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಮೊದಲ ಬಾರಿಗೆ ಫೆಬ್ರವರಿ 1ರಂದು ನೆರವೇರಿಸಲಾಗಿದೆ.



ಪಿಡಿಎ (ಪೇಟೆಂಟ್ ಡಕ್ಟಸ್ ಆರ್ಟೀರಿಯೋಸಸ್) ಡಿವೈಸ್ ಕ್ಲೋಷರ್ ಎಂದು ಕರೆಯಲಾಗುವ ಶಸ್ತ್ರಚಿಕಿತ್ಸೆಯನ್ನು ಶ್ರೀದೇವಿ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಹೃದಯದಲ್ಲಿ ಹೀಗೆ ರಂಧ್ರವಿದ್ದಾಗ ಒಂದೋ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಇಲ್ಲವೇ, ಸೂಕ್ಷ್ಮ ಕೊಳವೆಯನ್ನು ಕಾಲಿನ ರಕ್ತನಾಳದ ಮೂಲಕ ಹೃದಯದವರೆಗೂ ತೂರಿಸಿ, ತದನಂತರ ಅಲ್ಲಿ ರಂಧ್ರ ಇರುವ ಜಾಗಕ್ಕೆ ಪುಟ್ಟ ಪ್ಲಗ್ ಇರಿಸಿ ಅದನ್ನು ಮುಚ್ಚಬೇಕಾಗುತ್ತದೆ. ಹೀಗೆ ಕಾಲಿನ ರಕ್ತನಾಳದ ಮೂಲಕ ಪ್ಲಗ್ ಕೂರಿಸುವ ವಿಧಾನವನ್ನು 'ಪಿಡಿಎ ಡಿವೈಸ್ ಕ್ಲೋಷರ್' ಎನ್ನಲಾಗುತ್ತದೆ. ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಹಾಗೂ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಸೀಮಿತವಾಗಿದ್ದ ಈ ವಿಧಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡು ಹೃದಯದ ರಂಧ್ರ ಮುಚ್ಚಲಾಗಿದೆ ಎಂದು ಇದನ್ನು ನೆರವೇರಿಸಿದ ಹೃದ್ರೋಗತಜ್ಞ ಡಾ.ಸುರೇಶ್ ಅವರು ವಿವರಿಸಿದ್ದಾರೆ.

"ಈ ಮಗುವಿಗೆ ಹುಟ್ಟಿನಿಂದಲೇ ಹೃದಯದಲ್ಲಿ ರಂಧ್ರ ಇತ್ತು. ಇದರಿಂದಾಗಿ ಮಗುವಿಗೆ ಆಗಾಗ ಉಸಿರಾಟಕ್ಕೆ ಸಂಬಂಧಿಸಿದ ಸೋಂಕು ಕಾಣಿಸಿಕೊಳ್ಳುತ್ತಿತ್ತು. ಮಗು ಬೆಳೆದಂತೆ ರಂಧ್ರವು ಸ್ವಾಭಾವಿಕವಾಗಿ ಮುಚ್ಚಿಕೊಳ್ಳಲಿಲ್ಲ. ಬದಲಿಗೆ, ದೊಡ್ಡದಾಗುತ್ತಾ ಹೋಗುತ್ತಿತ್ತು. ಆದ್ದರಿಂದ, ಮಗು ಸ್ವಲ್ಪ ವಯಸ್ಸಿನವರೆಗೆ ಬೆಳವಣಿಗೆಯಾಗಲಿ ಎಂದು ಹತ್ತು ವರ್ಷಗಳವರೆಗೆ ಕಾಯ್ದು ಈಗ ಪಿಡಿಎ ಡಿವೈಸ್ ಕ್ಲೋಷರ್ ಮೂಲಕ ಪ್ಲಗ್ ಅಳವಡಿಸಲಾಗಿದೆ. ಈ ಕಾರ್ಯದಲ್ಲಿ ಪಿಡಿಯಾಟ್ರಿಕ್ ಕಾರ್ಡಿಯಾಲಜಿಸ್ಟ್ ಡಾ. ಕಲ್ಯಾಣ್ ರೆಡ್ಡಿ, ಅರಿವಳಿಕೆ ತಜ್ಞರು ಮಕ್ಕಳ ವಿಭಾಗದ ತಜ್ಞರು ಮತ್ತು ನರ್ಸಿಂಗ್ ವಿಭಾಗದ ಸಿಬ್ಬಂದಿ ಹಾಗೂ ಆಸ್ಪತ್ರೆಯ ಆಡಳಿತ ಮಂಡಳಿ ಸೇರಿದಂತೆ ಎಲ್ಲರ ಸಹಕಾರದಿಂದ ಇದನ್ನು ಸಾಧಿಸಿದ್ದು ಎಲ್ಲ ಸಿಬ್ಬಂದಿಗಳಿಗೂ ಧನ್ಯವಾದಗಳು" ಎಂದಿದ್ದಾರೆ, ಹೃದಯರೋಗ ತಜ್ಞ ಡಾ. ಸುರೇಶ್.

▪ **ವರದಿ: ಎನ್.ಆನಂದ**

# ಹಳೆಬೇರು – ಹೊಸ ಚಿಗುರು

## ಶ್ರೀದೇವಿ ಅಂಗಳದಲ್ಲಿ ಚೈತ್ರದ ಸೊಬಗು

ಫೆಬ್ರವರಿ 15ರಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ಅಂಗಳದಲ್ಲಿ ಚೈತ್ರದ ಚಿತ್ತಾರ. ವಿದ್ಯಾರ್ಥಿ– ವಿದ್ಯಾರ್ಥಿನಿಯರ ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು ಇದಕ್ಕೆ ಮುಖ್ಯ ಕಾರಣ ಹಳೆ ಮತ್ತು ಹೊಸ ವಿದ್ಯಾರ್ಥಿಗಳ ಅಪೂರ್ವ ಸಮಾಗಮ, ಸಮ್ಮಿಲನ. ಆಲಮ್ನಿ ಉತ್ಸವ, ಕಾಲೇಜು ಅಂಗಳಕ್ಕೆ ವಿಶೇಷ ಸೊಬಗು ತಂದಿತ್ತು.

ಪ್ರೇಮಿಗಳ ದಿನದ ಸಡಗರ– ಸಂಭ್ರಮ, ಮುಡಿಯ ಮಲ್ಲಿಗೆ, ಗುಲಾಬಿ ಬಾಡುವ ಮುನ್ನವೇ ಅಲ್ಯೂಮಿನಿ ಉತ್ಸವ ವಿದ್ಯಾರ್ಥಿಗಳ ಉತ್ಸಾಹವನ್ನು ಇಮ್ಮಡಿಗೊಳಿಸಿ, ಹೊಸ ಜೀವನ ಎಲ್ಲ ಕಡೆ ಕಂಗೊಳಿಸುವಂತೆ ಮಾಡಿತ್ತು.

ಕಾಲೇಜು ಮುಗಿಸಿ ಹೊರಬಂದವರ ಪೈಕಿ ಕೆಲವರು ಸರ್ಕಾರಿ ಹುದ್ದೆ, ಕೆಲವರು ಪ್ರತಿಷ್ಠಿತ ಕಂಪನಿಗಳಲ್ಲಿ ಗುರುತರ ಹುದ್ದೆ, ಮತ್ತೆ ಕೆಲವರು ಸ್ವಂತ ಉದ್ಯಮ ಆರಂಭಿಸಿ ತಾವೇ ಇತರರಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಬೆಳೆದಿದ್ದರು. ಇದಕ್ಕೆಲ್ಲ ತಾವು ವ್ಯಾಸಂಗ ಮಾಡಿದ ಶ್ರೀದೇವಿ ಕಾಲೇಜು ಮತ್ತು ಅಲ್ಲಿನ ಅಧ್ಯಾಪಕ ವರ್ಗ ಎಂಬ ವಿನೀತ ಭಾವ ಅವರಲ್ಲಿ ಮನೆ ಮಾಡಿದ್ದು ಹೆಮ್ಮೆಯ ವಿಷಯವಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

ವೇದಿಕೆಯ ಕಾರ್ಯಕ್ರಮ ಮುಗಿದು ಹೊತ್ತು ಮೀರುತ್ತಿದ್ದಂತೆಯೇ ಸಂಗೀತದ ಸ್ವರಗಳ ಲೀಲೆ ಇಡೀ ಸಭಾಂಗಣವನ್ನು ಆವರಿಸಿಕೊಂಡು, ಹಳೆ ಮತ್ತು ಹೊಸ ವಿದ್ಯಾರ್ಥಿಗಳು ಎಂಬ ಭೇದ–ಭಾವ ತಾರತಮ್ಯವಿಲ್ಲದೆ ಎಲ್ಲರೂ ಕೂಡಿ, ಹಾಡಿ ಕುಣಿದು ಕುಪ್ಪಳಿಸಿ 'ಸ್ಟುಡೆಂಟ್ ಲೈಫ್ ಗೋಲ್ಡನ್ ಲೈಫ್' ಎಂಬುದನ್ನು ನಿಜ ಅರ್ಥದಲ್ಲಿ ಸಾಕಾರಗೊಳಿಸಿದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳಾದ ಮಂಜುನಾಥ್, ಹೇಮಂತ್, ರಮೇಶ್, ಅರ್ಚನಾ, ಮಧು, ತಮ್ಮ ಆರಂಭಿಕ ಕಾಲೇಜು ದಿನಗಳ ಅನುಭವ ಮೆಲಕುಹಾಕಿ, ಸಂಸ್ಥೆಯ ಅಭಿವೃದ್ಧಿಗೆ ಕಾಯಾ, ವಾಚಾ, ಮನಸಾ ಶ್ರಮಿಸುವುದಾಗಿ ಪ್ರತಿಜ್ಞೆ ಮಾಡಿದರು. ವೇದಿಕೆ ಸಮಾರಂಭದಲ್ಲಿ ಮಾತನಾಡಿದ ಗಣ್ಯರು ಏನು ಹೇಳಿದ್ದಾರೆ ಎಂಬುದನ್ನು ನೋಡೋಣ.

### ಯುವಕರ ಕೈಯಲ್ಲಿದೆ ದೇಶದ ಭವಿಷ್ಯ

**ವಿರಾಟ್ ಶರ್ಮಾ, ಜೆಪ್ಟೋ ಕಂಪನಿ ಉಪಾಧ್ಯಕ್ಷ**

ದೇಶ ಕಟ್ಟುವಲ್ಲಿ ಯುವಕರ ಪಾತ್ರ ಬಹಳಮುಖ್ಯವಾಗಿದೆ. ಯುವಕರು ಮನಸ್ಸು ಮಾಡಿದರೆ, ಏನನ್ನು ಬೇಕಾದರೂ ಸಾಧಿಸಬಹುದು ಎಂಬುದನ್ನು ನಿತ್ಯದ ಬದುಕಿನಲ್ಲಿ ಕಾಣುತ್ತಿದ್ದೇವೆ. ಇಬ್ಬರೇ ವಿದ್ಯಾರ್ಥಿಗಳು ಕಟ್ಟಿದ ಜೆಪ್ಟೋ ಕಂಪನಿ ಇಂದು ಸಾವಿರಾರು ಕೋಟಿ. ರೂ ವ್ಯವಹಾರ ಮಾಡುವ ದೇಶದ ಪ್ರತಿಷ್ಠಿತ ಇ– ಕಾಮರ್ಸ್ ಉದ್ಯಮ. ಸಾವಿರಾರು ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ವಿದ್ಯಾರ್ಥಿಗಳು ಅತ್ಮವಿಶ್ವಾಸ ಬೆಳೆಸಿಕೊಂಡರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾವು ಕಟ್ಟಿದ ಕಂಪನಿಯೇ ಉದಾಹರಣೆಯಾಗಿದೆ. ಮನುಷ್ಯ ಎಷ್ಟೇ ಎತ್ತರಕ್ಕೆ ಹೋದರೂ, ಸಾಧನೆ ಮಾಡಿದರೂ, ಪಾಠ ಕಲಿಸಿದ ಗುರುಗಳನ್ನು, ಜನ್ಮಕೊಟ್ಟ ತಂದೆ–ತಾಯಿ, ವಿದ್ಯೆ ಕಲಿಸಿದ ಶಿಕ್ಷಣ ಸಂಸ್ಥೆಗಳನ್ನು ಮರೆಯಬಾರದು. ಬದಲಾವಣೆ ಜಗದ ನಿಯಮ, ಕಾಲಕ್ಕೆ ತಕ್ಕಂತೆ ಬದಲಾಗಬೇಕು ದೇಶದ ಮುಂದಿನ ಭವಿಷ್ಯ–ಸ್ವರೂಪ ಬದಲಾಯಿಸುವಲ್ಲಿ ಯುವ ಜನಾಂಗದ ಪಾತ್ರ ಬಹಳ ಮುಖ್ಯ.

### ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳೇ ನಿಜವಾದ ಆಸ್ತಿ

**ಡಾ.ಎಂ.ಆರ್.ಹುಲಿನಾಯ್ಕರ್, ಅಧ್ಯಕ್ಷರು, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ**

ಕಳೆದ 25 ವರ್ಷಗಳಲ್ಲಿ ಭಾರತ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಇದಕ್ಕೆ ಸರ್ಕಾರ ಮತ್ತು ಬಡ ಮತ್ತು ಮಧ್ಯಮ ವರ್ಗ ಪೋಷಕರು ಕಾರಣ. ತಮ್ಮ ಮಕ್ಕಳ ಭವಿಷ್ಯ ಉಜ್ವಲವಾಗಿರಲಿ ಎಂಬ ಕಾರಣಕ್ಕಾಗಿ ಹೊಟ್ಟೆ– ಬಟ್ಟೆ ಕಟ್ಟಿ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿದ್ದರಿಂದ ದೇಶ ಈ ಮಟ್ಟದ ಪ್ರಗತಿ ಸಾಧಿಸಿದೆ. ವಿದ್ಯಾರ್ಥಿಗಳೇ ಸಂಸ್ಥೆಯ ಆಸ್ತಿ, ಸಂಸ್ಥೆಯ ಬೆಳವಣಿಯಲ್ಲಿ ವಿದ್ಯಾರ್ಥಿಗಳು ಸಕ್ರಿಯ ಪಾತ್ರ ವಹಿಸಬೇಕು. ಇದು ನಿಮ್ಮ ಮನೆ ಯಾವಾಗ ಬೇಕಾದರೂ ಬಂದು ಕಿರಿಯರಿಗೆ ತಮ್ಮ ಅನುಭವವನ್ನು ಧಾರೆ ಎರೆಯಬಹುದು ಎಂದು ಆಹ್ವಾನ ನೀಡಿದರು.

### ವಿದ್ಯಾರ್ಥಿಗಳ ಪರಿಶ್ರಮದಲ್ಲಿ ಶಿಕ್ಷಣ ಸಂಸ್ಥೆ ಪ್ರಗತಿ

**ಎಂ.ಎಸ್.ಪಾಟೀಲ್, ಐಟಿ ಮತ್ತು ಹೆಚ್.ಆರ್.ಡಿ. ನಿರ್ದೇಶಕರು**

ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸತತ ಪರಿಶ್ರಮದಿಂದ ಶ್ರೀದೇವಿ ಶಿಕ್ಷಣ ಸಂಸ್ಥೆ ಸದ್ಯದಲ್ಲಿಯೇ ಡೀಮ್ಡ್ (ಸ್ವಾಯತ್ತ ವಿಶ್ವವಿದ್ಯಾನಿಲಯ)ವಾಗಲಿದೆ. ಕಳೆದ ಎರಡು ದಶಕಗಳ ಅವಧಿಯಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆ ನಿರೀಕ್ಷೆಗೂ ಮೀರಿ ಪ್ರಗತಿ ಸಾಧಿಸಿದೆ. ವಿದ್ಯಾರ್ಥಿಗಳ ಬಗ್ಗೆ, ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಸಂಸ್ಥೆಗೆ ಹೆಮ್ಮೆಯಿದೆ ಗೌರವಿದೆ. ಈ ಸಂಸ್ಥೆಯ ಕೀರ್ತಿ ಪತಾಕೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

### ಯುರೋಪ್‌ನಲ್ಲಿ ಪ್ರಾರಂಭ

**ಡಾ.ನರೇಂದ್ರ ವಿಶ್ವನಾಥ್, ಪ್ರಾಂಶುಪಾಲರು, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು.**

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು 22ವರ್ಷ ಪೂರ್ಣಗೊಳಿಸಿದೆ. ಬೆಳ್ಳಿಹಬ್ಬಕ್ಕೆ ಕಾಯುತ್ತಿದ್ದೇವೆ. ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಎಂಬ ಕಾರ್ಯಕ್ರಮ ಯುರೋಪ್ ಮತ್ತು ಉತ್ತರ ಅಮೆರಿಕಾದಲ್ಲಿ ಮೊದಲಿಗೆ ಪ್ರಾರಂಭವಾಗಿ ತದನಂತರ ಜಗತ್ತಿನಲ್ಲೆಲ್ಲ ಪಸರಿಸಿದೆ.

ಗಾಯಕ ಕಂಬದ ರಂಗಯ್ಯ ಹಾಡುಗಳು ಎಲ್ಲರ ಮನ, ಮನೆ ತಲುಪಿ, ಸರಿರಾತ್ರಿಯಾದರೂ ಮತ್ತೆ, ಮತ್ತೆ, ಗುನುಗುತ್ತಿತ್ತು.

▪ **ವರದಿ: ಕೆ. ಎಸ್. ರಾಜಮನ್ನಾರ್**

# ಆದರ್ಶ ಮೆರೆದ ಮಹೇಶ್ ಜಂಬುಲಿಂಗಂ

ಸಮಾಜದಲ್ಲಿ ಉನ್ನತ ಮೌಲ್ಯಗಳು, ಆದರ್ಶಗಳು ಹೇಗೆ ಪ್ರೇರಣೆ ಆಗುತ್ತದೆ ಮತ್ತು ಸಾವಿನ ಅನಂತರವೂ ಒಳ್ಳೆಯ ಕೆಲಸ ಮಾಡಲು ಎಷ್ಟೊಂದು ಸುವರ್ಣ ಅವಕಾಶಗಳಿವೆ ಎಂಬುದಕ್ಕೆ ಮಹೇಶ್ ಜಂಬುಲಿಂಗಂ ಅವರದು ತಾಜಾ ಉದಾಹರಣೆ ಎಂದರೆ ಅತಿಶಯೋಕ್ತಿಯೆನಲ್ಲ.!

ಮಹೇಶ್ ಜಂಬುಲಿಂಗಮ್ 73 (ನಿವೃತ್ತ ಚಾರ್ಟೆಡ್ ಅಕೌಂಟೆಂಟ್ ಸಿ.ಎ.) ಇತ್ತೀಚೆಗೆ



ಬೆಂಗಳೂರಿನಲ್ಲಿ ಕ್ಯಾನ್ಸರ್‌ನಿಂದ ವಿಧಿವಶರಾಗಿದ್ದು, ಅವರ ಕೊನೆಯ ಆಸೆಯಂತೆ ದೇಹವನ್ನು ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆಗೆ ದಾನವಾಗಿ ನೀಡಲಾಗಿದೆ. ಇದಕ್ಕೆ ಸ್ನೇಹಿತನ ಆದರ್ಶವೇ ಮುಖ್ಯ ಕಾರಣವಾಗಿದೆ. ಕೆಲದಿನಗಳ ಹಿಂದೆ ಜಂಬುಲಿಂಗಂ ಅವರ ಸ್ನೇಹಿತರು ತೀರಿಕೊಂಡಿದ್ದು ಅವರು ಸಹ ತುಮಕೂರಿನ ಶ್ರೀದೇವಿ ಆಸ್ಪತ್ರೆಗೆ ದೇಹದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದರು. ಈಗ ಅವರ ಸ್ನೇಹಿತ ಕೂಡ ಅದೇ ಹಾದಿಯಲ್ಲಿ ಸಾಗಿ ಉನ್ನತ ಪರಂಪರೆಗೆ ಕಾರಣವಾಗಿದ್ದಾರೆ.

"ಕೇವಲ ಆರುಗಂಟೆಯಲ್ಲಿ ಬೆಂಗಳೂರಿನಿಂದ ತುಮಕೂರಿಗೆ ದೇಹವನ್ನು ಸಾಗಿಸಿ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ, ಸಾವಿನ ಅನಂತರವೂ ಮನುಷ್ಯ ಉಪಯೋಗಕ್ಕೆ ಬರುವಂತಹ, ಶಾಶ್ವತವಾದ ಕೆಲಸ ಮಾಡಬಹುದು ಎಂಬುದಕ್ಕೆ ಜಂಬುಲಿಂಗಂ ಅವರ ಕುಟುಂಬ ಮಾದರಿಯಾಗಿದೆ.

'ಒಂದು ಮೃತದೇಹ ಒಂದು ವರ್ಷಗಳ ಕಾಲ ಸುಮಾರು 25ವೈದ್ಯಕೀಯ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಮಾಡಲು ಮತ್ತು ವೃತ್ತಿಯಲ್ಲಿ ಪರಿಣತಿ ಸಾಧಿಸಲು ನೆರವಾಗುತ್ತದೆ. ದೇಹದಾನಕ್ಕೆ ಎಷ್ಟು ಮಹತ್ವವಿದೆ ಎಂಬುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಮತ್ತೊಂದಿಲ್ಲ." ಎಂದು ಕಾಲೇಜು ಆಸ್ಪತ್ರೆಯ ಅನಾಟಮಿ (ಶರೀರ ಅಂಗರಚನಾ ಶಾಸ್ತ್ರ) ವಿಭಾಗದ ಮುಖ್ಯಸ್ಥೆ ಡಾ. ಶಿವಲೀಲಾ ಅಭಿಪ್ರಾಯ ಪಟ್ಟಿದ್ದಾರೆ.

▪ **ವರದಿ: ಕೆ.ಎಸ್. ರಾಜಮನ್ನಾರ್**

# ಶ್ರೀದುರ್ಗಾಂಬಿಕಾದೇವಿಯ ಐದನೇ ವಾರ್ಷಿಕೋತ್ಸವ



■ ಎನ್. ಭಾರತಿ
ಲೇಖಕಿ

## ಲೋಕಕಲ್ಯಾಣಕ್ಕಾಗಿ ವ್ರತ

ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಯ ಆವರಣದಲ್ಲಿ ಸ್ಥಾಪಿತವಾಗಿರುವ ಶ್ರೀದುರ್ಗಾಂಬಿಕಾ ದೇವಿಯ ಪತ್ರಿಷ್ಠಾಪನೆಯ ಪಂಚವರ್ಷದ ಕಾರ್ಯಕ್ರಮದ ಆಹ್ವಾನಪತ್ರಿಕೆಯನ್ನು ಡಾ ರಮಣ ಹುಲಿನಾಯ್ಕರ್ ಅವರು ವಾಟ್ಸಪ್‌ನಲ್ಲಿ ಕಳಿಸಿದ್ದಾರೆ. ಡಾ.ರಮಣಹುಲಿನಾಯ್ಕರ್ ಹಾಗೂ ಡಾ.ಲಾವಣ್ಯ ರಮಣ ಅವರದು ಅಪರೂಪದ ಜೋಡಿ. ಇಬ್ಬರೂ ಸಹ ದೈವಭಕ್ತರು.

ಅವರು ಪ್ರತಿ ತಿಂಗಳು ಹುಣ್ಣಿಮೆಯಂದು ತಮ್ಮ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ನೌಕರರಿಗೆ, ವಿದ್ಯಾರ್ಥಿಗಳಿಗೆ ಮತ್ತು ಸಮಸ್ತಜನರಿಗೆ ಒಳಿತಾಗಲಿ ಎನ್ನುವ ದೃಷ್ಟಿಯಿಂದ ಶ್ರೀದುರ್ಗಾಂಬಿಕಾದೇವಿಯ ಸನ್ನಿಧಾನದಲ್ಲಿ ದುರ್ಗಾಹೋಮವನ್ನು ಶ್ರದ್ಧೆಯಿಂದ ಮಾಡುತ್ತಿದ್ದಾರೆ. 'ಲೋಕಕ್ಕೆ ಒಳಿತಾಗಲಿ ಎಂದು ಆಚರಿಸುವ ಎಲ್ಲ ವ್ರತಗಳು ಕೈಗೂಡುತ್ತದೆ' ಎಂದು ನಮ್ಮ ಧರ್ಮ ಗ್ರಂಥಗಳು ಹೇಳುತ್ತವೆ.

## ಮರೆಯಲ್ಲಿದ್ದ ದೇವಿ

ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆ ಆವರಣದಲ್ಲಿ ಪ್ರತಿಷಾಪನೆಯಾಗಿರುವ ಶ್ರೀದುರ್ಗಾಂಬಿಕಾ ದೇವಸ್ಥಾನ ಆದರ್ಶದ ಹಿನ್ನೆಲೆಯೊಂದರಲ್ಲಿ  ರೂಪಿತಗೊಂಡಿದೆ. ಕಮಲೇಶ್ ಅವರು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದರು. ಹುಲಿನಾಯ್ಕರ್ ಅವರ ಕೊಠಡಿಯಲ್ಲಿದ್ದ ಶ್ರೀರಮಣ ಮಹರ್ಷಿಗಳನ್ನು ಫೋಟೋ ನೋಡಿ. 'ಇವರ ಪ್ರತಿಮೆಯನ್ನು ನಿಮ್ಮ ಕ್ಯಾಂಪಸ್‌ನಲ್ಲಿ ಪ್ರತಿಷ್ಠಾಪಿಸಿ' ಎಂದರು. ಆಗ ಡಾ.ಹುಲಿನಾಯ್ಕರ್ ಅವರು 'ನನ್ನ ಮಡದಿ ಶಾಂತದುರ್ಗಾದೇವಿಗೆ ಈ ಆವರಣದಲ್ಲಿ ದೇವಿ ಮೊದಲು ಪ್ರತಿಷ್ಠಾಪನೆ ಆಗಬೇಕು ಎನ್ನುವ ಆಶಯವಿದೆ' ಎಂದರು.

## ದೇವಿ ಆಗಮನಕ್ಕೆ ಸಿದ್ಧತೆ

ಅಲ್ಲಿಂದ ದೇವಿಯನ್ನು  ಶ್ರೀದೇವಿ ಸಂಸ್ಥೆಗೆ ಬರಮಾಡಿಕೊಳ್ಳುವ ಕೆಲಸಕ್ಕೆ ಚಾಲನೆ ನೀಡಲಾಯಿತು. ಕಾರ್ಕಳದ ನಿಟ್ಟೆಯ ಪ್ರಸನ್ನಾಚಾರ್ ಅವರು ಆಗಮಿಸಿದರು. ಚಿಕ್ಕಮಗಳೂರಿನ ದತ್ತಾತ್ರೇಯ ಉಪವಾಸಕರಾದ ಅಶೋಕಶರ್ಮ ಗುರೂಜಿ ಬಂದರು. ಉಡುಪಿಯಲ್ಲಿ ದೇವಸ್ಥಾನದ ನಿರ್ಮಾಣದಲ್ಲಿ ಸಿದ್ಧಹಸ್ತರೆನಿಸಿದ್ದ ಇಂಜಿನಿಯರ್ ರಮೇಶ್‌ರಾವ್ ಭೇಟಿಕೊಟ್ಟರು. ಶಬರಿಮಲೆಯ ಅಯ್ಯಪ್ಪಸ್ವಾಮಿ ದೇವಸ್ಥಾನದ ನಿರ್ಮಾಣದಲ್ಲಿ ಪಾಲ್ಗೊಂಡಿದ್ದ ವಂಶಸ್ಥರಾದ ಕೃಷ್ಣನಂಬೂದ್ರಿ ಅನಿರೀಕ್ಷಿತವಾಗಿ ಬಂದು ದೇವಸ್ಥಾನದ ಆಯವನ್ನು ನಿರ್ಧಾರ ಮಾಡಿದರು. ಇವರೆಲ್ಲರ ಸಂಯೋಜಕರಾಗಿ ಹಿರಿಯ ಐ.ಎ.ಎಸ್. ಅಧಿಕಾರಿ ಕೆ.ಎಸ್. ಸತ್ಯಮೂರ್ತಿ ಅವರು ಅಮೂಲ್ಯ ಸಹಾಯ ಮಾಡಿದರು.

ಇದಕ್ಕೆಲ್ಲ ಕಿರೀಟಪ್ರಾಯವಾಗುವಂತೆ ಸೂರಾಲು ವೆಂಕಟರಮಣಭಟ್ಟರು ಮತ್ತು ಅವರ ಮಡದಿ ಶ್ರೀಮತಿ ರತ್ನ ವೆಂಕಟರಮಣಭಟ್ಟರು ಶ್ರೀದುರ್ಗಾಂಬಿಕಾದೇವಿಯ ಮೂರ್ತಿಯ ಸಿದ್ಧತೆಯ ಹೊಣೆಹೊತ್ತರು.

ವಾಸ್ತವವಾಗಿ 2015ರಲ್ಲಿ ಶ್ರೀದುರ್ಗಾಂಬಿಕಾದೇವಿಯ ಆಲಯದ ಕೆಲಸ ಪ್ರಾರಂಭವಾಯಿತು. ಶ್ರೀದುರ್ಗಾಂಬಿಕಾದೇವಿ ಶಾಂತಸ್ವರೂಪದಲ್ಲಿ ಇಲ್ಲಿಗೆ ಬರಲು ಇಚ್ಛೆಪಡಲಿಲ್ಲ. ಇದಕ್ಕೆ ಮೊದಲು ಆಕೆ ಈ ಸ್ಥಳದಲ್ಲಿ 'ಉಚ್ಚಂಗಮ್ಮ' ಎನ್ನುವ ಹೆಸರಿನಲ್ಲಿ ಖ್ಯಾತಿಯಾಗಿದ್ದಳು. ಹಾಲುಮತಸ್ಥ  ಮತ್ತು ವಾಲ್ಮೀಕಿ ಎರಡು ಸಮುದಾಯಗಳು ಉಚ್ಚಂಗಮ್ಮನಿಗೆ ನಡೆದುಕೊಳ್ಳುತ್ತಿದ್ದರು. ಚಿತ್ರದುರ್ಗದ ಪಾಳೇಗಾರರ ಮನೆತನದ ದೇವಿ ಉಚ್ಚಂಗಮ್ಮ. ಸಂಪ್ರದಾಯದಂತೆ  ಆಕೆಗೆ ಪ್ರಾಣಿಬಲಿ ಕೊಡಲಾಗುತ್ತಿತ್ತು.

ಪ್ರಸನ್ನಾಚಾರ್ ಅವರು 'ಈ ಆವರಣ ಆಸ್ಪತ್ರೆಯಾದ ಕಾರಣದಿಂದ ಆಕೆಯನ್ನು ಶಾಂತರೂಪದಿಂದ ಇಲ್ಲಿ ನೆಲೆಸುವಂತೆ ಪ್ರಾರ್ಥಿಸೋಣ' ಎಂದು ಸಲಹೆ ನೀಡಿದರು. ಆ ಸಲಹೆಗೆ ಅನುಸಾರವಾಗಿ ಅನೇಕ ಧಾರ್ಮಿಕವಿಧಿಗಳು ನಡೆದವು. 'ಶ್ರೀವಿಷ್ಣುಸಹಸ್ರನಾಮ' 'ಶ್ರೀಲಲಿತಾಸಹಸ್ರನಾಮ' 'ಶತಚಂಡಿಕಾ ಹೋಮ' ಮೊದಲಾದವುಗಳು ನಡೆದವು. ವಿಶೇಷವಾಗಿ ಈ ಸಂದರ್ಭದಲ್ಲಿ ಶಾಂತಾದುರ್ಗಾದೇವಿಯವರು 'ಸಪ್ತಶತಿ ಪಾರಾಯಣ'ವನ್ನು ಎ. ರಘುರಾಮ್ ಗುರೂಜಿಯವರ ಮಾರ್ಗದರ್ಶನದಲ್ಲಿ ಪ್ರಾರಂಭ ಮಾಡಿದರು. ಶ್ರೀದೇವಿ ವಿದ್ಯಾಸಂಸ್ಥೆಯ ಆವರಣಕ್ಕೆ ದೇವಿ ಬರುವುದಕ್ಕೆ ಮುಂಚೆಯೇ ನಾಗಭೂಷಣಶರ್ಮ ದೇವಿಯ ಪೂಜೆಯನ್ನು ಪ್ರಾರಂಭಿಸಿದ್ದರು. "ಶಾಂತಸ್ವರೂಪದಿಂದ ಶ್ರೀದುರ್ಗಾಂಬಿಕಾದೇವಿ ಇಲ್ಲಿ ಬಂದು ನೆಲೆಸಲಿ. ಆಕೆಯ ಸೇವೆಯನ್ನು ಕಾಯ, ವಾಚ, ಮನಸಾ ಮಾಡುತ್ತಾ, ಬದುಕಿನ ಉಳಿದ ದಿನಗಳಲ್ಲಿ ಒಪ್ಪತ್ತು ಊಟ ಮಾಡುತ್ತೇನೆ" ಎನ್ನುವ ಹರಕೆ ಹೊತ್ತವರು, ಪೂಜ್ಯ ಶಾಂತಾದುರ್ಗಾದೇವಿ ಅಮ್ಮಾ

## ಶ್ರೀದುರ್ಗಾಂಬಿಕಾದೇವಿಯ ಆಗಮನ

2017ರ ಜನವರಿ 16ರಂದು ಶ್ರೀದುರ್ಗಾಂಬಿಕಾದೇವಿ ಶ್ರೀದೇವಿ ವಿದ್ಯಾಸಂಸ್ಥೆಯ ಆವರಣಕ್ಕೆ ಭಾಜಭಜಂತ್ರಿಯ ಮೂಲಕ ಆಗಮಿಸಿದಳು. ಫೆಬ್ರವರಿ 24ರಿಂದ 28ರವರೆಗೆ ನಡೆದ ಅಭೂತಪೂರ್ವ ಕಾರ್ಯಕ್ರಮದಲ್ಲಿ ಆಕೆಯನ್ನು ಶ್ರೀದೇವಿ ವಿದ್ಯಾಮಂದಿರದ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ನಮ್ಮ ಕುಟುಂಬಕ್ಕೆ ಇದೊಂದು ಬರೆಯಲಾಗದ ಸನ್ನಿವೇಶ. ನನ್ನ ಅತ್ತೆ ಅಂದರೆ ಅಮ್ಮ ಸರೋಜಮ್ಮ ಅವರು ಈ ಸಮಾರಂಭವನ್ನು ನೋಡಿದರು. ಇದು ಅವರ ಬದುಕಿದ ಕೊನೆಯ ಸಮಾರಂಭ. ದೇವಿಯ ಆಶೀರ್ವಾದ ಅವರಿಗೆ ದೊರಕಿತಲ್ಲ ಎನ್ನುವ ಸಮಾಧಾನ ನನ್ನಲ್ಲಿದೆ.

ಶ್ರೀದುರ್ಗಾಂಬಿಕಾದೇವಿ ಇಲ್ಲಿ ನೆಲೆಗೊಂಡ ಮೇಲೆ ಕರೋನ ಭೀಕರಕಾಯಿಲೆ ಕಬಂಧ ಬಾಹುವಿನಂತೆ ಇಡೀ ರಾಷ್ಟ್ರವನ್ನು ತಬ್ಬಿಕೊಂಡುಬಿಟ್ಟಿತು. ದೇವಿಯ ಪ್ರತಿಷ್ಠಾಪನೆಯಾಗಿದೆ. ಪ್ರತಿದಿನ ಮಂಡಲ ಪೂಜೆ ನಡೆಯಬೇಕು. ಮನೆಯಿಂದ ಯಾರು ಹೊರಬರುತ್ತಿಲ್ಲ. ಎಲ್ಲರಿಗೂ ಜೀವ ಭಯ. ಇನ್ನು ಸರ್ಕಾರ ಶ್ರೀದೇವಿ ಆಸ್ಪತ್ರೆಯನ್ನು ಕರೋನಾ ಚಿಕಿತ್ಸಾ ಆಸ್ಪತ್ರೆಯೆಂದು ಘೋಷಿಸಿತು. ಆಸ್ಪತ್ರೆಯ ಮೂಲೆಮೂಲೆಗಳಲ್ಲಿ ರೋಗಿಗಳು ಮಲಗಿದ್ದರು. ಆಗ ಡಾ.ರಮಣ ಅವರು ನಾಯಕರಾಗಿ ಮುನ್ನುಗಿ ಸಾವಿರಾರು ಜನರ ಪ್ರಾಣ ಉಳಿಸಲು ಶ್ರೀದೇವಿ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ತಂಡಕ್ಕೆ ಪ್ರೇರಣೆ ಕೊಟ್ಟರು.

## ದೇವಿಯ ಮಹಿಮೆ

ಆ ಸಂದರ್ಭದಲ್ಲಿ ಶಾಂತದುರ್ಗದೇವಿ, ಡಾ.ಹುಲಿನಾಯ್ಕರ್, ಡಾ.ರಮಣ, ಡಾ.ಲಾವಣ್ಯ ಮೊದಲಾದವರು ದುರ್ಗಾಂಬಿಕಾದೇವಿಯ ಪೂಜೆ ನಿರ್ವಿಘ್ನವಾಗಿ ನಡೆಯಲು ದೊಡ್ಡ ಸಾಹಸವನ್ನು ಮಾಡಿದರು. ದೇವರನ್ನು ನಂಬಿದವರಿಗೆ ಎಂತಹ ಸತ್ಫಲಗಳು ದೊರೆಯುತ್ತದೆ ಎಂಬುದಕ್ಕೆ ಶಾಂತದುರ್ಗಾದೇವಿ ಮತ್ತು ಡಾ.ಹುಲಿನಾಯ್ಕರ್ ಕುಟುಂಬವೇ ದೊಡ್ಡ ಉದಾಹರಣೆಯಾಗಿದೆ. ದೇವಿಯೇ ಪ್ರೇರಣೆ ನೀಡಿದಂತೆ ಶೃಂಗೇರಿಯ ವಿದ್ಯಾವಂತವಟು ಚಂದ್ರಶೇಖರ್ ತಾವಾಗಿಯೇ ಹುಡುಕಿಕೊಂಡು ಶ್ರೀದೇವಿ ವಿದ್ಯಾಸಂಸ್ಥೆಗೆ ಬಂದು



ಇಲ್ಲಿನ ಪೂಜಾಕಾರ್ಯ ಕೈಗೊಂಡರು. ಇದೇ ಸಂದರ್ಭದಲ್ಲಿ ಕಳ್ಳರು ಶ್ರೀದುರ್ಗಾಂಬಿಕಾದೇವಿಯ ದೇವಸ್ಥಾನಕ್ಕೆ ರಾತ್ರಿ ಮುತ್ತಿಗೆ ಹಾಕಿ ದೇವಿಯ ಮೇಲಿದ್ದ ಒಡವೆಗಳನ್ನೆಲ್ಲ ಬಿಚ್ಚಿ, ಅದನ್ನು ತೆಗೆದುಕೊಂಡು ಹೋಗಲು ಸಾಧ್ಯವಾಗದೇ ಅಲ್ಲಿಯೇ ಬಿಟ್ಟು ಹೋದರು.

ಐದು ವರ್ಷಗಳಲ್ಲಿ ದೇವಿಯ ಮಹಿಮೆಯನ್ನು ಹೆಚ್ಚಿಸುವ ಇಂತಹ ಅನೇಕ ಪವಾಡ ಸದೃಶ ಘಟನೆಗಳು ನಡೆದಿವೆ, ನಡೆಯುತ್ತಿವೆ. ದುರ್ಗಾದೇವಿಯ ಸನ್ನಿಧಾನದಲ್ಲಿ 'ಮಹಾಲಕ್ಷ್ಮಿ' 'ಮಹಾಸರಸ್ವತಿ' 'ಮಹಾಕಾಳಿ'ಯರ ಸನ್ನಿಧಾನವಿದೆ. ದೇವಿಯ ಹಿಂದೆ ನಾಗದೇವರ ಪ್ರತಿಷ್ಠಾಪನೆಯಾಗಿದೆ.

ಡಾ.ರಮಣ ಅವರು ಬಹಳ ಅಪೇಕ್ಷೆಪಟ್ಟು ಉಜ್ಜಯಿನಿಯಿಂದ ಶ್ರೀಶಂಭುಲಿಂಗೇಶ್ವರಸ್ವಾಮಿಯನ್ನು ತಂದು ಪ್ರತಿಷ್ಠಾಪನೆ ಮಾಡಿದ್ದಾರೆ.

ಪ್ರತಿವರ್ಷ ಶ್ರೀದುರ್ಗಾಂಬಿಕಾದೇವಿಯ ಸನ್ನಿಧಾನದಲ್ಲಿ ಶಿವರಾತ್ರಿ ಜಾಗರಣಾ ಮಹೋತ್ಸವ, ದೇವಿಯ ಪ್ರತಿಷ್ಠಾಪನೆಯ ವಾರ್ಷಿಕೋತ್ಸವ, ಅದರ ಅಂಗವಾಗಿ ವಿವಿಧ ಕಾರ್ಯಕ್ರಮಗಳು. ಆಷಾಢಮಾಸದಲ್ಲಿ ಬರುವ ದೇವಿಯ ಜನ್ಮದಿನಾಚರಣೆ, ನವರಾತ್ರಿ ಉತ್ಸವ, ಕಾರ್ತಿಕಮಾಸದಲ್ಲಿ ದೀಪೋತ್ಸವ ಮೊದಲಾದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

## ಭಕ್ತರ ಮಹಾಪೂರ

ಶುಕ್ರವಾರ ಮತ್ತು ಮಂಗಳವಾರದಂದು ಶ್ರೀದುರ್ಗಾಂಬಿಕಾದೇವಿಗೆ ವಿಶೇಷವಾದ ಪೂಜೆಯನ್ನು ನಡೆಸಲಾಗುತ್ತದೆ. ತುಮಕೂರಿನ ಶಿರಾಗೇಟಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನೆಲೆಸಿರುವ ದುರ್ಗಾಂಬಿಕಾದೇವಿ ಸುಮಾರು ಹತ್ತುಹನ್ನೆರಡು ಹಳ್ಳಿಗಳಲ್ಲಿ ಎಲ್ಲೂ ಕಾಣಲಾಗದ ದೇವಿಯ ಆಲಯವಾಗಿದೆ. ಹಳ್ಳಿ ಹಳ್ಳಿಯಿಂದ ಭಕ್ತರು ಬಂದು ದೇವಿಯನ್ನು ವಿವಿಧ ರೀತಿಯಲ್ಲಿ ಪ್ರಾರ್ಥಿಸುತ್ತಾರೆ. ಇನ್ನು ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿರುವ ಬೋಧಕರು, ಬೋಧಕೇತರ ಸಿಬ್ಬಂದಿಗಳು ಇತರ ನೌಕರರು ಪ್ರತಿದಿನ ಶ್ರೀದುರ್ಗಾಂಬಿಕಾದೇವಿಯ ಆಶೀರ್ವಾದವನ್ನು ಪಡೆಯುತ್ತಾರೆ. ಶ್ರೀದೇವಿ ಸಮೂಹ ವಿದ್ಯಾ ಸಂಸ್ಥೆಯಲ್ಲಿ ಹತ್ತು ಸಾವಿರ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಅವರೆಲ್ಲ ಸಡಗರ ಸಂಭ್ರಮದಿಂದ ಪ್ರತಿದಿನ ಬಂದು ದೇವಿಯ ಆಶೀರ್ವಾದ ಪಡೆಯುವ ದೃಶ್ಯವನ್ನು ನೋಡುವುದೇ ಚೆಂದ.

## ನಮ್ಮ ಶ್ರೀದುರ್ಗಾಂಬಿಕಾದೇವಿ ಕರುಣಾಮಯಿ

ಶ್ರೀದುಗಾಂಬಿಕಾದೇವಿಯ ಆಲಯ ಅರ್ಚಕರಾದ ಚಂದ್ರಶೇಖರ್ ಅವರು "ಇಲ್ಲಿಗೆ ಬಂದು ಪ್ರಾರ್ಥಿಸುವ ಎಲ್ಲಾ ಭಕ್ತರ ಕಷ್ಟಗಳನ್ನು ಸೇವೆ ಪರಿಹರಿಸಿಕೊಟ್ಟಿದ್ದಾಳೆ. ಆಕೆ ಮಾತೃಸ್ವರೂಪಿಣಿ. ಒಬ್ಬರು ಭಕ್ತರು ವ್ಯಾಪಾರದಲ್ಲಿ ನಷ್ಟ ಅನುಭವಿಸಿದ್ದರು. 'ದೇವಿಗೆ ಯಾವ ಹೋಮ ಮಾಡಿಸಿದರೆ ಆಕೆಯ ಕೃಪೆಗೆ ಪಾತ್ರರಾಗಬಹುದು' ಎಂದು ಕೇಳಿದರು. ವ್ಯಾಪಾರದಲ್ಲಿ ಅವರಿಗೆ ನಷ್ಟವಾಗಿತ್ತು. ಅದಕ್ಕೆ ದೇವಿ 'ಯಾವುದೇ ಹೋಮ ಬೇಡ ಪ್ರತಿದಿನ ಚಂಡಿಕಾಪಾರಾಯಣ ಮಾಡಿ' ಎಂದಳು. ಅದರಿಂದ ಅವರಿಗೆ ಒಳ್ಳೆಯದಾಯಿತು. ಶ್ರೀದುರ್ಗಾದೀಪ ನಮಸ್ಕಾರವನ್ನು ದೇವಿ ಹೆಚ್ಚು ಇಷ್ಟಪಡುತ್ತಾಳೆ." ಎನ್ನುತ್ತಾರೆ.

ಡಾ. ಹುಲಿನಾಯ್ಕರ್ ಅವರು ಈ ಸಂದರ್ಭದಲ್ಲಿ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. "ನಮ್ಮ ಕಾಲೇಜಿನ ಆವರಣದಲ್ಲಿ ಪ್ರತಿಷ್ಠಾಪನೆಯಾಗಿರುವ ಜಗನ್ಮಾತೆ ಶ್ರೀದುರ್ಗಾಂಬಿಕೆ ದೇವಿ ನಮ್ಮೆಲ್ಲರ ಬದುಕಿನಲ್ಲೂ ಸಕಾರಾತ್ಮಕ ಚಿಂತನೆಗೆ ಪ್ರೇರಣೆ ನೀಡಿದ್ದಾಳೆ. ವಿಜ್ಞಾನಿ ಮತ್ತು ಸಂತರಲ್ಲಿ ವ್ಯತ್ಯಾಸವಿಲ್ಲ. ಆಧುನಿಕಯುಗದಲ್ಲಿ ವಿಜ್ಞಾನ ಮತ್ತು ಅಧ್ಯಾತ್ಮವನ್ನು ಸಮಾನವಾಗಿ ಬೆರೆಸಿ ಪ್ರತಿಯೊಬ್ಬರು ತಮ್ಮದೇ ಆದ ಜೀವನ ಸೂತ್ರವನ್ನು ಕಂಡುಕೊಂಡರೆ ಅವರ ಬದುಕಿನಲ್ಲಿ ಯಾವುದೇ ತೊಂದರೆ ಬರುವುದಿಲ್ಲ".

ಸದಾಕಾಲ ಭಗವಂತನ ಧ್ಯಾನದಲ್ಲಿ ಕಳೆಯುತ್ತಾ, ಲೌಕಿಕಕ್ಕಿಂತ ಅಲೌಕಿಕ ವಿಚಾರಗಳಿಗೆ ಹೆಚ್ಚಿನ ಬೆಲೆ ಕೊಡುವ ಶ್ರೀಮತಿ ಶಾಂತದುರ್ಗಾದೇವಿಹುಲಿನಾಯ್ಕರ್ ಅವರು "ಇಂದು ಪೋಷಕರು ಮಕ್ಕಳಲ್ಲಿ ಸದ್ಗುಣಗಳನ್ನು ಬೆಳೆಸಬೇಕಾಗಿದೆ. ನಾಲ್ಕು ಮಕ್ಕಳಲ್ಲಿ ನಾವು ದೈವಶ್ರದ್ಧೆ ಬೆಳೆಯುವಂತೆ ಪ್ರೇರಣೆ ನೀಡಿದ್ದೆವು. ಅದರ ಫಲವಾಗಿ ನಾಲ್ವರು ಉತ್ತಮ ಸಂಸ್ಕಾರಗಳನ್ನ ಬೆಳೆಸಿಕೊಂಡಿದ್ದಾರೆ. ಇಂದಿನ ಮಕ್ಕಳಲ್ಲಿ ಆತ್ಮವಿಶ್ವಾಸ ಕುಗ್ಗುತ್ತಿದೆ. ಭವಿಷ್ಯ ತುಂಬಾ ಕಷ್ಟವಾಗಿದೆ ಎನ್ನುವ ಭಯದಿಂದ ಅವರು ಕುಗ್ಗುತ್ತಿದ್ದಾರೆ. ಅವರಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬಬೇಕು." ಎಂದು ಪೋಷಕರಿಗೆ ಮತ್ತು ಸಮಾಜಕ್ಕೆ ಕಿವಿಮಾತು ಹೇಳಿದರು

ಡಾ. ರಮಣ ಹುಲಿನಾಯ್ಕರ್ ಅವರು 'ಪ್ರತಿಯೊಬ್ಬರ ಚಿಂತನೆ ಉದಾತ್ತವಾಗಿರಬೇಕಾದರೆ ಅವರಲ್ಲಿ ದೈವಶ್ರದ್ಧೆ ಇರಬೇಕು. ದೈವಶ್ರದ್ಧೆಯಿಂದ ಕರ್ತವ್ಯಪ್ರಜ್ಞೆ ಬೆಳೆಯುತ್ತದೆ. ಕರ್ತವ್ಯ ಪ್ರಜ್ಞೆಯಿಂದ ವ್ಯಕ್ತಿ ಗರಿಷ್ಠ ಸಾಧನೆ ಮಾಡಬಹುದು" ಎನ್ನುತ್ತಾರೆ.

ಡಾ. ಲಾವಣ್ಯ ರಮಣ ಅವರು "ಶ್ರೀದೇವಿ ವಿದ್ಯಾಸಂಸ್ಥೆ ಮತ್ತು ಇತರ ಸಂಸ್ಥೆಗಳ ಬೆಳವಣಿಗೆಯಲ್ಲಿ ಶ್ರೀದುರ್ಗಾಂಬಿಕಾದೇವಿಯ ಕೃಪಾಶೀರ್ವಾದವಿರುವುದನ್ನು ನಾವು ಮರೆಯುವುದಿಲ್ಲ. ದೇವಿಯಿಂದಾಗಿ ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಎಲ್ಲರಲ್ಲೂ ನಾವು ಒಂದು ಕುಟುಂಬದವರು ಎನ್ನುವ ಪ್ರಜ್ಞೆ ಬಂದಿದೆ." ಎನ್ನುತ್ತಾರೆ.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಸದಸ್ಯರಾದ ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ಅವರು "ನಾವು ಸಣ್ಣವರಿದ್ದಾಗಿನಿಂದಲೂ ನನ್ನ ತಾಯಿಗೆ ದೇವಿಯ ಆಲಯ ನಿರ್ಮಿಸಬೇಕು ಎನ್ನುವ ಕನಸಿತ್ತು. ಅದು ಈಡೇರಿತು. ಅಪ್ಪಾಜಿ ಮತ್ತು ಮಮ್ಮಿ ಇಬ್ಬರೂ ಏಕಮನಸ್ಕರಾಗಿ ದೇವಿಯ ಆರಾಧನೆ ಮಾಡಿದ ಕಾರಣಕ್ಕಾಗಿ ನಮ್ಮ ಜೀವನದಲ್ಲಿ ಸಮೃದ್ಧಿ ಮತ್ತು ನೆಮ್ಮದಿ ದೊರಕಿದೆ." ಎನ್ನುತ್ತಾರೆ.

## ನೀವು ಬನ್ನಿ

ಐದನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಮಾರ್ಚ್ ಎರಡರಂದು ಬೆಳಿಗ್ಗೆ ಗಣಪತಿಹೋಮ, ಚಂಡಿಕಾ ಪಾರಾಯಣ, ಆಶ್ಲೇಷಬಲಿ, ಮೂರನೇ ತಾರೀಕು ರುದ್ರಹೋಮ, ಚಂಡಿಕಾಪಾರಾಯಣ ಶತಚಂಡಿಕಾಹವನದ ಕಳಶಾಧಿವಾಸ ಹಾಗೂ ನಾಲ್ಕನೆಯ ತಾರೀಕು ಶತಚಂಡಿಕಾಹೋಮ, ಕಲಾ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ ಕೊನೆಗೆ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆಯುತ್ತವೆ.

ನೀವುಗಳು ಇದರಲ್ಲಿ ಭಾಗವಹಿಸಿ. ಶ್ರೀದುರ್ಗಾಂಬಿಕಾದೇವಿಯ ಕೃಪೆಗೆ ಪಾತ್ರರಾಗಿ.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**